# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 | ಸಂಚಿಕೆ – 290 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 10–06–2024 ಸೋಮವಾರ | ಪುಟ: 4 | ಬೆಲೆ : ರೂ.2–00
Volume - 01 | Issue - 290 | Title- Code: KARKAN 28269 | Chitradurga | Date: 10-06-2024 Monday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಸಸಿ ನೆಡಲು ಬನ್ನಿ ಎನ್ನುವವರ ಸಂಖ್ಯೆ ಕಡಿಮೆ ಆಗಿದೆ: ರಘುಚಂದನ್ 2

ಭೋವಿ ಅಭಿವೃದ್ಧಿ ನಿಗಮದಲ್ಲಿ 100 ಕೋಟಿ ಅವ್ಯವಹಾರ 3

ನನ್ನಿವಾಳ ನ್ಯಾಯಬೆಲೆ ಅಂಗಡಿ ಪಡಿತರ ವಿತರಣೆಯಲ್ಲಿ ವಿಳಂಬ: ಗ್ರಾಮಸ್ಥರ ಆಕ್ರೋಶ 4



ಸುದ್ದಿ, ಜಾಹಿರಾತಿಗೆ
9686622252


### ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!


» ಶುಭೋದಯ

# ಟೀಮ್ ಮೋದಿ 3.0

## ಮೋದಿ 3ನೇ ಬಾರಿ ಪ್ರಧಾನಿ: ನಗರದಲ್ಲಿ ಬಿಜೆಪಿ ಸಂಭ್ರಮ








» ಚಿತ್ರದುರ್ಗ

ದೇಶ ಪ್ರಧಾನ ಮಂತ್ರಿಯಾಗಿ ಮೂರನೇ ಬಾರಿ ನೇಮಕವಾಗಿರುವ ನರೇಂದ್ರ ಮೋದಿಯವರು ಇಂದು ಪ್ರಮಾಣ ವಚನ ಸ್ವೀಕಾರದ ಹಿನ್ನಲೆಯಲ್ಲಿ ಭಾನುವಾರ ಸಂಜೆ ಭಾರತೀಯ ಜನತಾ ಪಾರ್ಟಿಯವತಿಯಿಂದ ಜೆಸಿಆರ್ ಬಡಾವಣೆಯ ಗಣಪತಿ ಮತ್ತು ಅಂಜನೇಯ ದೇವಾಲಯದಲ್ಲಿ ಪೂಜೆಯನ್ನು ಸಲ್ಲಿಸಲಾಯಿತು.


ಇದೇ ಸಂದರ್ಭದಲ್ಲಿ ಪಕ್ಷದ ಮುಖಂಡರಿಗೆ ಕಾರ್ಯಕರ್ತರಿಗೆ ಅಭಿಮಾನಿಗಳಿಗೆ ಸಿಹಿಯನ್ನು ಹಂಚಿಕೆ ಮಾಡಿ ನಂತರ ಪಟಾಕಿಯನ್ನು ಸಿಡಿಸಿ ಸಂಭ್ರಮಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮಾಜಿ ಶಾಸಕರಾದ ಜಿ.ಎಚ್,ತಿಪ್ಪಾರೆಡ್ಡಿ, ನೆಹರುರವರು ಮೂರು ಬಾರಿ ದೇಶದ ಪ್ರಧಾನ ಮಂತ್ರಿಗಳಾಗಿದ್ದರು ತದ ನಂತರ ಯಾರೂ ಸಹಾ ಮೂರು ಭಾರಿ ಪ್ರಧಾನ ಮಂತ್ರಿಗಳಾಗಿರಲಿಲ್ಲ ಆದರೆ ಈಗ ನರೇಂದ್ರ ಮೋದಿಯವರು ಸತತವಾಗಿ ಮೂರು ಬಾರಿ ಪ್ರಧಾನ ಮಂತ್ರಿಗಳಾಗುವುದರ ಮೂಲಕ ಇತಿಹಾಸವನ್ನು ಸೃಷ್ಟಿ ಮಾಡಿದ್ದಾರೆ.

ಕಳೆದ 10 ವರ್ಷ ನರೇಂದ್ರ ಮೋದಿಯವರು ಪ್ರಧಾನಮಂತ್ರಿಗಳಾಗುವುದರ ಮೂಲಕ ದೇಶವನ್ನು ಉತ್ತಮವಾಗಿ ಅಭೀವೃದ್ಧಿ ಮಾಡಿದ್ದಾರೆ. ಮುಂದಿನ ದಿನಮಾನದಲ್ಲಿ ದೇಶ ಮೋದಿಯವರ ನಾಯಕತ್ವದಲ್ಲಿ ಮತ್ತಷ್ಟು ಅಭಿವೃದ್ಧಿಯನ್ನು ಕಾಣಲಿದೆ. ಮೋದಿಯವರ ಪ್ರಮಾಣ ವಚನ ಸಮಯದಲ್ಲಿ ಪ್ರಪಂಚದ ವಿವಿಧ ದೇಶದ ನಾಯಕರು ಭಾಗವಹಿಸುವುದರ ಮೂಲಕ ಮೋದಿಯವರಿಗೆ ಬಲವನ್ನು ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ನಗರಾಧ್ಯಕ್ಷ ನವೀನ್ ಚಾಲುಕ್ಯ, ನಗರಸಭಾ ಸದಸ್ಯರಾದ ಶ್ರೀಮತಿ ರೋಹಿಣಿ, ಹರೀಶ್, ಕೃಷ್ಣಮೂರ್ತಿ, ವಕ್ತಾರರಾದ ದಗ್ಗೆ ಶಿವಪ್ರಕಾಶ್, ನಾಗರಾಜ್ ಬೇದ್ರೇ, ನಾಗೇಂದ್ರಪ್ಪ, ಮುರುಗೇಶ್, ರಮೇಶ್, ಸೋಮಣ್ಣ, ಆದರ್ಶ, ಕಲಾ, ವಿರೂಪಾಕ್ಷ, ಗೋಪಿ, ವೆಂಕಟೇಶ್, ಪ್ರದೀಪ್, ವೆಂಕಟೇಶ್ ಸೇರಿದಂತೆ ಬಿಜೆಪಿ ಪಕ್ಷದ ಮುಖಂಡರು, ಕಾರ್ಯಕರ್ತರು ಅಭಿಮಾನಿಗಳು ಭಾಗವಹಿಸಿದ್ದರು.











## ಫಾಸ್ಟ್ ನ್ಯೂಸ್

### ಪ್ರತಿಭಾ ಪುರಸ್ಕಾರ

» ಚಿತ್ರದುರ್ಗ

ಚಿತ್ರದುರ್ಗ ತಾಲ್ಲೂಕು ಅಖಿಲ ಭಾರತ ಗಾಣಿಗರ ಸಂಘದವತಿಯಿಂದಗಾಣಿಗಸಮಾಜದಿಂದಪ್ರತಿಭಾ ಪುರಸ್ಕಾರ ಮತ್ತು ಮಧು–ವರರ ಸಮಾವೇಶವನ್ನು ಜೂ. 30ರಂದು ನಗರದ ಪಂಚಚಾರ್ಯ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ ಎಂದು ಸಂಘದ ಅಧ್ಯಕ್ಷರಾದ ಎ.ಆರ್.ತಿಪ್ಪೇಸ್ವಾಮಿ ಹಾಗೂ ಕಾರ್ಯದರ್ಶಿ ಟಿ.ಪಿ.ಜ್ಞಾನಮೂರ್ತಿ ತಿಳಿಸಿದ್ದಾರೆ.

ಚಿತ್ರದುರ್ಗ ತಾಲ್ಲೂಕಿನಲ್ಲಿ ಇರುವ ಗಾಣಿಗ ಸಮಾಜದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಪ್ರೋತ್ಸಾಹಿಸುವ ದೃಷ್ಟಿಯಿಂದ 2023–24ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ,85ಕ್ಕಿಂತ ಹೆಚ್ಚು ಅಂಕ ಪಡೆದ ಚಿತ್ರದುರ್ಗ ತಾಲ್ಲೂಕಿನ ಪ್ರತಿಭಾನಿತ್ವ ವಿದ್ಯಾರ್ಥಿಗಳು ಜೂ, 20ರೊಳಗಾಗಿ ಭಾವಚಿತ್ರ, ಅಂಕಪಟ್ಟಿ ಮತ್ತು ಆಧಾರ ಕಾರ್ಡ ಜೆರಾಕ್ಸ್‌ನೊಂದಿಗೆ ಚಿತ್ರದುರ್ಗ ತಾಲ್ಲೂಕು ಗಾಣಿಗರ ಸಂಘ, ಶ್ರೀ ಕಂಠೇಶ್ವರಸ್ವಾಮಿ ದಲ್ಲಾಲಿ ಮಂಡಿ, ಎ.ಬ್ಲಾಕ್ ಎ.ಪಿ.ಎಂ.ಸಿ. ಯಾರ್ಡ್ ಚಿತ್ರದುರ್ಗ ಈ ವಿಳಾಸಕ್ಕೆ ಸ್ವಂತಹ ತಲುಪಿಸಲು ಕೋರಲಾಗಿದೆ.

ಗಾಣಿಗ ಸಮಾಜದ ಹಿತ ದೃಷ್ಟಿಯಿಂದ ಪ್ರಥಮ ಬಾರಿಗೆ ಜಿಲ್ಲಾ ಮಟ್ಟದ ವಧು–ವರರ ಸಮಾವೇಶವನ್ನು ಏರ್ಪಡಿಸಲಾಗಿದೆ. ಸಮಾಜದ ಭಾಂಧವರು ಇದರ ಸದುಪಯೋಗವನ್ನು ಪಡೆಯಲು ಗಾಣಿಗರ ಸಂಘ ಕೋರಿದ್ದು, ಹೆಚ್ಚಿನ ಮಾಹಿತಿಗಾಗಿ 9448154819, 9845396588, 9449974004, 7795374334ನ್ನು ಸಂಪರ್ಕ ಮಾಡಬಹುದಾಗಿದೆ.

### ವಿದ್ಯುತ್ ವ್ಯತ್ಯಯ

» ದಾವಣಗೆರೆ

66/11 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಎಂ.ಸಿ.ಸಿ.ಬಿ ಎಫ್2 ಫೀಡನ▯▯ನಲ್ಲಿ ಮಹಾನಗರ ಪಾಲಿಕೆ ವತಿಯಿಂದ ಒಳ ಚರಂಡಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವುದರಿಂದ ಜೂ. 10 ರಂದು ಬೆಳಿಗ್ಗೆ 10 ರಿಂದ ಸಂಜೆ 4 ಗಂಟೆಯವರೆಗೆ ಸಿದ್ದವೀರಪ್ಪ ಬಡಾವಣೆಯ 9,10, 11, 12,13 ಮತ್ತು 14ನೇ ಕ್ರಾಸ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವ್ಯತ್ಯಯವಾಗಲಿದೆ.

### ನೀಟ್ ನಂದನ್‌ಗೆ 173ನೇ ರ್‍ಯಾಂಕ್

» ಚಳ್ಳಕೆರೆ



ಇಲ್ಲಿನ ವಾಲ್ಮೀಕಿ ನಗರ ವಾಸಿಗಳಾದ ಜೀವವಿಮಾ ಕಂಪನಿ ಅಧಿಕಾರಿಯಾದ ಪಿ.ನಾಗೇಂದ್ರಗುಪ್ತ ಮತ್ತು ಎಚ್.ಗೀತಾಂಜಲಿಯವರ ಪುತ್ರನಂದನ್ ಪ್ರಸ್ತುತ 2024ರ ನೀಟ್ ಪರೀಕ್ಷೆಯಲ್ಲಿ 173 ನೇ ಆಲ್ ಇಂಡಿಯಾ ರ್‍ಯಾಕಿಂಗ್ ಸ್ಥಾನ ಪಡೆದಿದ್ದಾನೆ. ಚಳ್ಳಕೆರೆ ನಗರದಲ್ಲೇ ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸ ಮಾಡಿದ ನಂದನ್ ನಂತರ ಕಾಲೇಜು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರು ತೆರಳಿದ್ದು ನಂತರ 2024ರ ನೀಟ್ ಪರೀಕ್ಷೆ ಬರೆದಿದ್ದ. ಇತ್ತೀಚೆಗೆ ಪ್ರಕಟಗೊಂಡ ಫಲಿತಾಂಶದಲ್ಲಿ ನಂದನ್ ರಾಷ್ಟ್ರೀಯಮಟ್ಟದಲ್ಲಿ 173ನೇ ರ್‍ಯಾಕಿಂಗ್‌ನಲ್ಲಿ ನೀಟ್ ಪರೀಕ್ಷೆ ಉತ್ತೀರ್ಣನಾಗಿದ್ದು ಇವನ ಸಾಧನೆಗೆ ಮೆಚ್ಚುಗೆ ವ್ಯಕ್ತವಾಗಿದೆ.

### ತಾಲ್ಲೂಕು ಪಂಚಾಯಿತಿ ಕಚೇರಿ ಸ್ಥಳಾಂತರ

» ದಾವಣಗೆರೆ

ದಾವಣಗೆರೆ ತಾಪಂ ಕಚೇರಿಯನ್ನು ಜಿಪಂ ಹತ್ತಿರ ದೂರದರ್ಶನ ಕೇಂದ್ರದ ಪಕ್ಕದಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಸ್ಥಳಾಂತರಿಸಲಾಗಿರುತ್ತದೆ. ಜೂನ್ 10 ರ ನಂತರಕಚೇರಿಗೆಸಂಬಂಧಿಸಿದಪತ್ರವ್ಯವಹಾರವನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ದಾವಣಗೆರೆ,ಜಿಲ್ಲಾ ಪಂಚಾಯತ್ ಕಚೇರಿ ಹತ್ತಿರ, ದೂರದರ್ಶನ ಕೇಂದ್ರದ ಪಕ್ಕ, ಲೋಕಿಕೆರೆ ರಸ್ತೆ, ದಾವಣಗೆರೆ–577005.

## ಫಾಸ್ಟ್ ನ್ಯೂಸ್

### ಯೋಗ ಸ್ಪರ್ಧೆ: ಕೆ.ವೈ ಸೃಷ್ಟಿ ರಾಷ್ಟ್ರ ಮಟ್ಟಕ್ಕೆ ಆಯ್ಕೆ




» ದಾವಣಗೆರೆ

ಬೆಂಗಳೂರಿನಲ್ಲಿ ಕಳೆದ ನಾಲ್ಕರಂದು ನಡೆದ ರಾಜ್ಯಮಟ್ಟದ ಒಲಂಪಿಯಡ್ ಯೋಗ ಸ್ಪರ್ಧೆಯಲ್ಲಿ ಹರಿಹರದ ಅಂತರಾಷ್ಟ್ರೀಯ ಯೋಗ ಪಟು ಕೆ.ವೈ.ಸೃಷ್ಟಿ ಪ್ರಥಮ ಸ್ಥಾನ ಗಳಿಸುವುದರ ಮೂಲಕ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಇದೇ ತಿಂಗಳು ಮೈಸೂರಿನಲ್ಲಿ 17. 18. 19. 20 ರಂದು ನಡೆಯುವ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಸೃಷ್ಟಿ ಈಗಾಗಲೇ 4ನೇ ತರಗತಿಯಿಂದಲೂ ಸತತ 12 ಗಂಟೆಗಳ ಯೋಗ ಸೂರ್ಯಸನ ಮಾಡಿ ಗ್ಲೋಬಲ್ ವಾರ್ಡ್ ರೆಕಾರ್ಡ್ ಮಾಡಿದ್ದೂ, ನೇಪಾಳ, ವಿಹಾಟ್ನಮ್ ದೇಶಗಳಲ್ಲಿ ಸ್ಪರ್ಧೆ ಮಾಡಿ ಹಲವು ಹಲವು ಚಿನ್ನದ ಪದಗಳನ್ನು ಗಳಿಸಿ ರಾಷ್ಟ್ರಕ್ಕೆ, ಹರಿಹರ ನಗರಕ್ಕೆ ಕೀರ್ತಿ ತಂದಿದ್ದಾಳೆ. ಹರಿಹರ ತಾಲೂಕಿನ ಭಾನುವಳ್ಳಿ ಗ್ರಾಮದ ಗ್ರಾಮೀಣ ಪ್ರತಿಭೆ ಈ ಬಾರಿಯೂ ಕೂಡ ರಾಷ್ಟ್ರಮಟ್ಟದಲ್ಲಿ ಕರ್ನಾಟಕ ರಾಜ್ಯಕ್ಕೆ ಕೀರ್ತಿ ತರಲೆಂದು ನೀಲಕಂಠೇಶ್ವರ ಶಾಲಾ ಮುಖ್ಯಸ್ಥರು ಹಾಗೂ ಸಿಬ್ಬಂದಿ , ಇನ್ಸೈಟ್ ಐಎಎಸ್ ಸಂಸ್ಥಾಪಕ ಜಿಬಿ ವಿನಯ್ ಕುಮಾರ್ ಸ್ವಾಭಿಮಾನಿ ಬಳಗದ ಹಿರಿಯ ಪತ್ರಕರ್ತ ಪುರಂದರ ಲೋಕಿ ಕೆರೆ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ ಏಕಾಂತಪ್ಪ, ಓ ಎನ್.ಸಿದ್ದಯ್ಯ ಒಡೆಯರ್ , ಗಂಗಾಧರ್ ಕಮಲಾಪುರ ಸೇರಿದಂತೆ ಹಲವಾರು ಸಂಘ ಸಂಸ್ಥೆಗಳು ಶುಭ ಹಾರೈಸಿವೆ.

### ರಾಜ್ಯಮಟ್ಟದ ಒಲಂಪಿಯಾಡ್ ಯೋಗ ಸ್ಪರ್ಧೆಯಲ್ಲಿ ರಾಷ್ಟ್ರ ಮಟ್ಟಕ್ಕೆ ಹರಿಹರದ ಕಲ್ಲೇಶ್ವರಿ ಆಯ್ಕೆ


» ದಾವಣಗೆರೆ



ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಇಲಾಖೆ ಇವರು ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿ ಶಿಕ್ಷಕರ ಸದನದಲ್ಲಿ ಕಳೆದ ನಾಲ್ಕರಂದು ಆಯೋಜಿಸಿದ್ದ ರಾಜ್ಯಮಟ್ಟದ ಒಲಂಪಿಯಡ್ ಯೋಗ ಸ್ಪರ್ಧೆಯಲ್ಲಿ ಹರಿಹರದ ಸಪ್ತರ್ಷಿ ಯೋಗದಾರ್ ಸ್ಪೋರ್ಟ್ಸ್ ಅಕಾಡೆಮಿ ಸಂಸ್ಥೆಯ ವಿದ್ಯಾರ್ಥಿಗಳು ಮತ್ತು ಅಂತರಾಷ್ಟ್ರೀಯ ಯೋಗ ಪಟುಗಳಾದ ದಾವಣಗೆರೆ ಜಿಲ್ಲೆಯ ಹರಿಹರದ ಕು॥ ಕಲ್ಲೇಶ್ವರಿ, ಕು॥ ಕೆ.ವೈ. ಸೃಷ್ಟಿ, ಕು॥ ನಮಿತಾ ಎನ್. ಪ್ರಭು ಪ್ರಥಮ ಸ್ಥಾನಗಳಿಸುವುದರ ಮೂಲಕ ರಾಷ್ಟ್ರೀಯ ಯೋಗ ಒಲಂಪಿಯಾಡ್ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.ಇದೇ ತಿಂಗಳು ಮೈಸೂರಿನಲ್ಲಿ 17. 18. 19. 20 ರಂದು ನಡೆಯುವ ರಾಷ್ಟ್ರಮಟ್ಟದ ಯೋಗ ಒಲಂಪಿಯಾಡ್ ಸ್ಪರ್ಧೆಯಲ್ಲಿ ಮೇಲಿನ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಲಿದ್ದಾರೆ.ಕು॥ ಕೆ.ವೈ. ಸೃಷ್ಟಿ, ಈಗಾಗಲೇ 4ನೇ ತರಗತಿಯಿಂದಲೂ ಸತತ 12 ಗಂಟೆಗಳ ಯೋಗ ಸೂರ್ಯಸನ ಮಾಡಿ ಗ್ಲೋಬಲ್ ವಾರ್ಡ್ ರೆಕಾರ್ಡ್ ಮಾಡಿದ್ದೂ, ನೇಪಾಳ, ವಿಹಾಟ್ನಮ್ ದೇಶಗಳಲ್ಲಿ ಸ್ಪರ್ಧೆ ಮಾಡಿ ಹಲವು ಹಲವು ಚಿನ್ನದ ಪದಗಳನ್ನು ಗಳಿಸಿ ರಾಷ್ಟ್ರಕ್ಕೆ, ಹರಿಹರ ನಗರಕ್ಕೆ ಕೀರ್ತಿ ತಂದಿದ್ದಾಳೆ. ಈ ಯೋಗಾಸನ ವಿದ್ಯಾರ್ಥಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು, ತಾಲ್ಲೂಕಿನ ಶಾಸಕರುಗಳು ಹಾಗೂ ಸಂಘ-ಸಂಸ್ಥೆಗಳು, ಶಿಕ್ಷಣ ಇಲಾಖೆಯ ಪದಾಧಿಕಾರಿಗಳು, ಹರಿಹರ ನಗರಸಭೆಯ ಅಧ್ಯಕ್ಷರು, ಸದಸ್ಯರುಗಳು ಮುಂತಾದವರು ಶುಭ ಹಾರೈಸಿದ್ದಾರೆ ಎಂದು ಸಂಸ್ಥೆಯ ಯೋಗ ಶಿಕ್ಷಕರು ಹಾಗೂ ಅಧ್ಯಕ್ಷರೂ ಆದ ಡಾಕ್ಟರೇಟ್ ಪುರಸ್ಕೃತರಾದ ಕೆ. ಜೈಮುನಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಅಂತರಾಷ್ಟ್ರೀಯ ಯೋಗಾಸನ ಸ್ಪರ್ಧೆಯಲ್ಲಿ ಡಾಕ್ಟರೇಟ್ ಪುರಸ್ಕೃತ ಕೆ. ಜೈಮುನಿಗೆ ಸ್ವರ್ಣ ಪದಕ

» ತಮಿಳುನಾಡು



ಸ್ಕೂಲ್ ಗೇಮ್ಸ್ ಸ್ಪೋರ್ಟ್ಸ್ ಡೆವಲಪ್ಮೆಂಟ್ ಫೌಂಡೇಶನ್ ತಮಿಳುನಾಡು ಮತ್ತು ಸ್ಕೂಲ್ ಗೇಮ್ ಸ್ಪೋರ್ಟ್ಸ್ ಡೆವಲಪ್ಮೆಂಟ್ ಫೌಂಡೇಶನ್ ಇಂಡಿಯಾ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ ಮೇ 31 ಮತ್ತು ಜೂನ್1ರಂದು ನಡೆದ ಐದನೇ ಅಂತರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳು ಗೋವಾದ ಡೆಕಾಥ್ಲಾನ್ ಆವರಣದಲ್ಲಿ ನಡೆದ ಅಂತರಾಷ್ಟ್ರೀಯ ಯೋಗಾಸನ ಸ್ಪರ್ಧೆಯಲ್ಲಿ ಕರ್ನಾಟಕದ ದಾವಣಗೆರೆ ಜಿಲ್ಲೆಯ ಡಾಕ್ಟರೇಟ್ ಪುರಸ್ಕೃತರಾದ ಕೆ. ಜೈಮುನಿ ಅವರು ಪ್ರಥಮ ಸ್ಥಾನ ಪಡೆಯುವ ಮೂಲಕ ಸ್ವರ್ಣ ಪದಕವನ್ನು ಗಳಿಸಿದ್ದು, ತಂಡದ ಪ್ರಶಸ್ತಿಯನ್ನು ತಮ್ಮದಾಗಿರಿಸಿಕೊಂಡಿದ್ದಾರೆ.

# ಸಸಿ ನೆಡಲು ಬನ್ನಿ ಎನ್ನುವವರ ಸಂಖ್ಯೆ ಕಡಿಮೆ

» ಚಿತ್ರದುರ್ಗ



ನಾವು ಪರಿಸರವನ್ನು ಬೆಳಸಿದರೆ ಅದು ನಮ್ಮನ್ನು ಉಳಿಸುತ್ತದೆ. ಮರಗಳನ್ನು ಕಡಿಯುವುದಕ್ಕಿಂತ ಸಸಿಗಳನ್ನು ನೆಡುವ ಕೆಲಸವನ್ನು ಮಾಡಬೇಕಿದೆ ಎಂದು ಬಿಜೆಪಿ ಯುವ ಮಖಂಡ ರಘುಚಂದನ್ ತಿಳಿಸಿದ್ದಾರೆ.

ನಗರದ ಜೋಗಿಮಟ್ಟಿ ರಸ್ತೆಯಲ್ಲಿನ ಯಂಗಮ್ಮನ ಕಟ್ಟೆ ಬಡಾವಣೆಯಲ್ಲಿನ ನೀಲಾದ್ರಿ ನೇಸರ ಕ್ಷೇಮಾಭೀವೃದ್ಧಿ ಸಂಘದ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಸಸಿಯನ್ನು ನೆಟ್ಟು ಮಾತನಾಡಿದರು.

ಇಂದಿನ ದಿನಮಾನದಲ್ಲಿ ಸಸಿಯನ್ನು ನೆಡಲು ಬನ್ನಿ ಎಂದು ಕಡೆಯುವವರು ಕಡಿಮೆಯಾಗಿದ್ದಾರೆ. ದೇವಸ್ಥಾನಕ್ಕೆ ಸಹಾಯ ಮಾಡಿ ರಸ್ತೆಯನ್ನು ಮಾಡಿಸಿಕೊಡಿ ಎಂದು ಕೇಳುವವರ ಸಂಖ್ಯೆ ಹೆಚ್ಚಾಗಿದೆ. ಈ ಸಮಯದಲ್ಲಿ ನೀಲಾದ್ರಿ ನೇಸರ ಕ್ಷೇಮಾಭಿವೃದ್ಧಿ ಸಂಘದವರು ವಿಶ್ವ ಪರಿಸರ ದಿನಾಚರಣೆ ಮಾಡುತ್ತಿರುವುದು ಸಂತೋಷದ ಸಂಗತಿಯಾಗಿದೆ ಎಂದರು.

ನಾವು ಪರಿಸರವನ್ನು ಉಳಿಸಿ ಬೆಳಸಿದರೆ ಅದು ನಮ್ಮನ್ನು ಮುಂದಿನ ದಿನದಲ್ಲಿ ಉಳಿಸುತ್ತದೆ, ಅದರಿಂದ ನೀಡುವ ಉತ್ತಮವಾದ ಆಮ್ಲಜನಕ ನಮ್ಮ ಉಸಿರಾಗುತ್ತದೆ ಉತ್ತಮವಾದ ಉಸಿರನ್ನು ಸೇವನೆ ಮಾಡುವುದರಿಂದ ನಮ್ಮ ಆರೋಗ್ಯವೂ ಸಹಾ ಚನ್ನಾಗಿ ಇರುತ್ತದೆ ಇಂದಿನ ದಿನಮಾನದಲ್ಲಿ ಕಲುಷಿತವಾದ ಗಾಳಿ ಮತ್ತು ನೀರನ್ನು ಸೇವನೆ ಮಾಡುವುದರ ಮೂಲಕ ನಮ್ಮ ಬದುಕು ದುಸ್ಥಿರವಾಗಿದೆ ಎಂದು ತಿಳಿಸಿದರು.

ವಾರಕ್ಕೊಮ್ಮೆ ವೈದ್ಯರನ್ನು ಬೇಟಿ ಮಾಡುವ ಪ್ರಸಂಗ ಬರುತ್ತಿದೆ. ಆದರೆ ಉತ್ತಮವಾದ ಪರಿಸರ ಇದ್ದರೆ ಇವೆಲ್ಲಾ ತಪ್ಪುತ್ತದೆ ಈ ಹಿನ್ನಲೆಯಲ್ಲಿ ಪರಿಸರವನ್ನು ಉಳಿಸಿ ಬೆಳಸುವ ಕಾರ್ಯಕ್ಕೆ ನಾವೆಲ್ಲರು ಸಹಾ ಮುಂದಾಗಬೇಕಿದೆ ಎಂದು ಕರೆ ನೀಡಿದರು.

ಚಿತ್ರದುರ್ಗದಲ್ಲಿ ರಸ್ತೆಯ ಆಗಲೀಕರಣ ಮಾಡುವ ನೆಪದಲ್ಲಿ ಹಲವಾರು ಹಳೆಯದಾದ ಮರಗಳನ್ನು ಕಡಿದಿದ್ದಾರೆ. ಮತ್ತೇ ಅವು ಅಷ್ಟು ಬೆಳೆಯಲು ಹಲವಾರು ವರ್ಷಗಳು ಬೇಕಾಗುತ್ತದೆ. ಮರಗಳ ಕಡಿಯವುವಿಕೆಯಿಂದ ಬಿಸಿಲಿನ ತಾಪಮಾನ ಹೆಚ್ಚಾಗುತ್ತದೆ, ಮಳೆಯ ಪ್ರಮಾಣ ಕಡಿಮೆಯಾಗುತ್ತದೆ ಎಂದರು.

ಇಲ್ಲಿ ನೀವು ಮಾಡಿದ ಕಾರ್ಯ ಉತ್ತಮವಾದದು ಆಗಿದೆ ಇದು ಚಿತ್ರದುರ್ಗದ ಜನತೆಗೆ ಮಾದರಿಯಾಗಲಿ, ಇದಕ್ಕೆ ನಾವು ಸಹಾ ಕೈಜೋಡಿಸುತ್ತೇನೆ 1000 ಸಸಿಗಳನ್ನು ನನ್ನಿಂದ ಕೊಡಿಸುತ್ತೇನೆ. ಅಲ್ಲದೆ ಇಲ್ಲಿ ಕೊಳವೆಬಾವಿಯನ್ನು ಹಾಕಿಸುವಂತೆ ಸಂಘದವರು ಮನವಿ ಮಾಡಿದ್ದರೆ ಅದಕ್ಕೂ ಸಹಾ ಸಹಕಾರ ನೀಡುತ್ತೇನೆ ಎಂದು ಭರವಸೆ ನೀಡಿದರು.

ಇಲ್ಲಿ ಸಸಿಗಳನ್ನು ನಡೆವಾಗ ದೊಡ್ಡವರು ನೆಡದೆ ಮನೆಯಲ್ಲಿನ ಮಕ್ಕಳಿಂದ ನೆಡಿಸಿ, ಅದಕ್ಕೆ ಅವರ ಹೆಸರನ್ನು ಇಡಿ, ಅಲ್ಲದೆ ಅವುಗಳಿಗೆ ಪ್ರತಿ ದಿನ ನೀರನ್ನು ಹಾಕಿಸುವ ಅಭ್ಯಾಸವನ್ನು ಮಾಡಿಸಿ ಇದ್ದಲ್ಲದೆ ಮನೆಯಲ್ಲಿ ಸಾಕು ಪ್ರಾಣಿಗಳನ್ನು ಸಾಕಿರಿ ಇದರಿಂದ ಮುಂದೆ ನಿಮ್ಮ ಮಕ್ಕಳು ನಿಮ್ಮನ್ನು ವೃದ್ಧಾಶ್ರಮಕ್ಕೆ ಕಳುಹಿಸುವುದಿಲ್ಲ. ಇದರಿಂದ ನಿಮ್ಮ ಮಕ್ಕಳಲ್ಲಿ ಸಂಸ್ಕಾರ, ಸಂಸ್ಕೃತಿ ಬೆಳೆಯುತ್ತದೆ ಎಂದರು.

ಇಂದಿನ ಮಕ್ಕಳಿಗೆ ಜಾತಿಯ ಬಗ್ಗೆ ತಿಳಿಸಬೇಡ ನಾವೆಲ್ಲರು ಒಂದೇ ಎಂಬ ಭಾವನೆಯನ್ನು ಮೂಡಿಸುವ ವಾತಾವರಣವನ್ನು ನಿರ್ಮಾಣ ಮಾಡಿ, ಪರಿಸರ ದಿನಾಚರಣೆ ಕೇವಲ ಒಂದು ದಿನ ಅಚರಣೆ ಮಾಡುವ ಹಬ್ಬವಾಗದೆ ವರ್ಷದಲ್ಲಿ ಪೂರ್ತಿ ದಿನ ಮಾಡುವ ಹಬ್ಬವಾಗಬೇಕು ಆಗ ಮಾತ್ರ ನಮ್ಮ ಭೂಮಿ ಹಸಿರಾಗಲು ಸಾಧ್ಯವಿದೆ ಎಂದು ತಿಳಿಸಿದರು.

ಪರಿಸರವಾದಿ ಹೆಚ್.ಎಸ್.ಕೆ.ಸ್ವಾಮಿ ಮಾತನಾಡಿ, ಇಂದಿನ ದಿನಮಾನದಲ್ಲಿ ನಾವುಗಳು ಖಾದಿ ಬಳಕೆಯನ್ನು ಮರೆಯುತ್ತಿದ್ದೇವೆ, ವಿದೇಶಿ ವಸ್ತ್ರಗಳಿಗೆ ಮಾರು ಹೋಗಿ ಗಾಂಧೀಜಿಯವರು ತಿಳಿಸಿದ ಖಾದಿಯನ್ನು ಬಳಕೆ ಮಾಡುತ್ತಿಲ್ಲ ಇದರಿಂದ ಹಲವಾರು ಜನ ಸಂಕಷ್ಟಕ್ಕೆ ಇಡಾಗುತ್ತಿದ್ದಾರೆ ಅದೇ ನಾವು ಖಾದಿಯನ್ನು ಬಳಕೆ ಮಾಡಿದರೆ ನಮ್ಮ ದೇಹಕ್ಕೂ ತಂಪು ಇದನ್ನು ನಿರ್ಮಾಣ ಮಾಡಿದವರ ಹೊಟ್ಟೆಯೂ ಸಹಾ ತುಂಬುತ್ತದೆ, ಪ್ಲಾಸ್ಟೋಕ್ ಬಳಕೆಯನ್ನು ಪೂರ್ಣ ಪ್ರಮಾಣದಲ್ಲಿ ನಿಷೇಧ ಮಾಡಿ ಹೊರಗಡೆ ಹೋಗುವಾಗ ಕೈ ಚೀಲವನ್ನು ತೆಗೆದುಕೊಂಡು ಹೋದರೆ ಅದರಿಂದ ಪ್ಲಾಸ್ಟಿಕ್ ಬಳೆಯನ್ನು ನಿಷೇಧ ಮಾಡಿದಂತೆ ಆಗುತ್ತದೆ ಎಂದರು.

ಮನೆಯ ಕಸವನ್ನು ಎಲ್ಲಿ ಅಂದರೆ ಅಲ್ಲಿ ಹಾಕ ಬೇಡಿ ನಗರಸಭೆಯ ವಾಹನಕ್ಕೆ ನೀಡಿ ಇದರಿಂದ ಪರಿಸರವನ್ನು ಉಳಿಸಿದಂತೆ ಆಗುತ್ತದೆ. ಒಮ್ಮೆ ಬಳಸಿದ ವಸ್ತಗಳನ್ನು ಕಸವೆಂದು ಭಾವಿಸಬೇಡಿ ಅದರಿಂದ ಪುನರ್ ಬಳಕೆ ಮಾಡುವ ಬಗ್ಗೆ ಅಲೋಚನೆ ಮಾಡಿ, ಮನೆಯಲ್ಲಿ ಮಹಿಳೆಯರು ಮನಸ್ಸು ಮಾಡಿದರೆ ಅಸಾಧ್ಯ ಎನ್ನುವುದು ಯಾವುದ ಇಲ್ಲ ಎಲ್ಲವು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ನೀಲಾದ್ರಿನೇಸರಕ್ಷೇಮಾಭೀವೃದ್ದಿಸಂಘದ ಅಧ್ಯಕ್ಷ ವಿಜಯ ಕುಮಾರ್ ಮಾತನಾಡಿ, ಈ ಸಂಘವನ್ನು 4 ಬಡಾವಣೆಯವರು ಸೇರಿ ನಿರ್ಮಾಣ ಮಾಡಲಾಗಿದೆ. ಇಲ್ಲಿ 42 ಮನೆಗಳಿದ್ದು 180 ಜನರಿದ್ದಾರೆ. ಉತ್ತಮವಾದ ಪರಿಸರವನ್ನು ನಿರ್ಮಾಣ ಮಾಡಬೇಕೆಂದು ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದರು.

ವಿಶ್ವ ತಾಯಂದಿರ ದಿನ, ತಂದೆಯಂದಿರ ದಿನ, ಹುಟ್ಟು ಹಬ್ಬ, ವಿವಾಹ ವಾರ್ಷಿಕ ದಿನ, ಮಕ್ಕಳ ದಿನಾಚರಣೆ ಸೇರಿದಂತೆ ವಿವಿಧ ರೀತಿಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಇಲ್ಲಿ ಸುಮಾರು 4 ಎಕರೆ ವಿಸ್ತೀರ್ಣದಲ್ಲಿ ಪಾರ್ಕ್ ಇದೆ. ಅದನ್ನು ಉತ್ತಮ ಪಡಿಸಬೇಕೆಂದು ಯೋಜನೆಯನ್ನು ಸಹಾ ನಿರ್ಮಾಣ ಮಾಡಲಾಗಿದ್ದು ,ಾನಿಗಳ ಸಹಾಯವನ್ನು ಕೇಳಲಾಗಿದೆ. ಈ ಜಾಗದಲ್ಲಿ ಉತ್ತಮವಾದ ರಸ್ತೆ ಇಲ್ಲ, ಇದರಿಂದ ಈ ಬಾಗಕ್ಕೆ ಉತ್ತಮವಾದ ರಸ್ತೆಯನ್ನು ನಿರ್ಮಾಣ ಮಾಡಿಕೊಡಬೇಕೆಂದು ಚುನಾಯಿತ ಪ್ರತಿನಿಧಿಗಳಲ್ಲಿ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ನೀಲಾದ್ರಿ ನೇಸರ ಕ್ಷೇಮಾಭಿವೃದ್ಧಿ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ನಳಿನಿ, ರಾಮಪ್ಪ, ವಾಣಿ, ಸಂಘದ ಗೌರವಾಧ್ಯಕ್ಷ ಯಶವಂತ ಇದ್ದರು.

# ಉತ್ತಮ ಸೇವೆ ಮಾಡುವ ನೌಕರ ಮನಸ್ಸಿನಲ್ಲಿ ಉಳಿಯುತ್ತಾನೆ: ಬಿಇಓ ಕೆ.ಎಸ್.ಸುರೇಶ್

» ಚಳ್ಳಕೆರೆ

ರಾಜ್ಯದ ಹಲವಾರು ಇಲಾಖೆಗಳ ಕಾರ್ಯವೈಖರಿಗೆ ಹೋಲಿಸಿದರೆ ಶಿಕ್ಷಣ ಇಲಾಖೆಯ ಕಾರ್ಯ ವಿಶೇಷತೆಯಿಂದ ಕೂಡಿದೆ. ಕಾರಣ, ಸಮಾಜದ ಹಲವಾರು ವರ್ಗದ ಜನರು ತಮ್ಮ ಕೆಲಸ ಕಾರ್ಯಗಳಿಗಾಗಿ ಶಿಕ್ಷಣ ಇಲಾಖೆಯನ್ನು ಆವಲಂಬಿಸಿದ್ದಾರೆ. ಇಲಾಖೆಯಲ್ಲಿ ನಿಯಮಾವಳಿ ಪ್ರಕಾರ ಕಾರ್ಯನಿರ್ವಹಿಸಿ ಎಲ್ಲರ ಮೆಚ್ಚುಗೆಗಳಿಸುವ ಕಾರ್ಯ ಶ್ಲಾಘನೀಯ. ಇಂತಹ ಉತ್ತಮ ಕೆಲಸ ಮಾಡಿ ಪದೋನ್ನತಿ ಹೊಂದಿ ವರ್ಗಾವಣೆಗೊಂಡ ನಮ್ಮ ಇಲಾಖೆಯ ಸಿಬ್ಬಂದಿ ಹೆಂಜಾರಪ್ಪನವರ ಕಾರ್ಯವನ್ನು ಎಲ್ಲರೂ ಪ್ರಶಂಸಿಸುತ್ತಾರೆಂದು ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಎಸ್.ಸುರೇಶ್ ತಿಳಿಸಿದರು.ಅವರು, ತಮ್ಮ ಕಚೇರಿ ನೌಕರ ಹೆಂಜಾರಪ್ಪ ಕಳೆದ ಕೆಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದು,ಇತ್ತೀಚೆಗೆ ತಾನೇ ಇವರು ಮುಂಬಡ್ತಿ ಹೊಂದಿ ರಾಮನಗರ ಜಿಲ್ಲೆಗೆ ವರ್ಗಾವಾದ ಹಿನ್ನೆಲೆಯಲ್ಲಿ ಅವರಿಗೆ ಸನ್ಮಾನಿಸಿ ಬೀಳ್ಕೊಡಲಾಯಿತು.



ಚಳ್ಳಕೆರೆ ನಗರದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹೆಂಜಾರಪ್ಪನವರನ್ನು ಬಿಇಓ ಕೆ.ಎಸ್.ಸುರೇಶ್ ಅಭಿನಂದಿಸಿ ಬೀಳ್ಕೊಟ್ಟರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಹೆಂಜಾರಪ್ಪ, ನನ್ನ ಎಲ್ಲಾ ಉತ್ತಮ ಕಾರ್ಯಗಳಿಗೆ ಕ್ಷೇತ್ರಶಿಕ್ಷಣಾಧಿಕಾರಿ ಕೆ.ಎಸ್.ಸುರೇಶ್‌ರವರ ಮಾರ್ಗದರ್ಶನಪ್ರಮುಖವಾದದ್ದು. ಕಚೇರಿಯ ಎಲ್ಲಾ ಸಿಬ್ಬಂದಿ ಹಾಗೂ ಶಿಕ್ಷಕರು ತಮ್ಮ ಕೆಲಸ ಕಾರ್ಯಗಳ ಬಗ್ಗೆ ಮನವಿ ಮಾಡುತ್ತಿದ್ದರು. ಯಾರಿಗೂ ಸಹ ತೊಂದರೆಯಾಗದಂತೆ ಸಕಾಲದಲ್ಲಿ ಕಾರ್ಯನಿರ್ವಹಿಸಿದ ತೃಪ್ತಿ ನನ್ನದು ಎಂದರು.ತಾಲ್ಲೂಕುಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಹಲಿಂಗಪ್ಪ, ನಿವೃತ್ತ ಸೂಪರಿಡೆಂಟ್ ಧನಂಜಯ, ಮಾರುತಿಭಂಡಾರಿ,ಸಣ್ಣಬೋರಮ್ಮ, ಸುರೇಶ್, ಡಿ.ಎಸ್.ಪಾಲಯ್ಯ, ಈರಣ್ಣ ಭಾಗವಹಿಸಿದ್ದರು.

# ಬೀಜ, ಗೊಬ್ಬರ ಕೊರತೆ ಆಗದಂತೆ ನೋಡಿಕೊಳ್ಳಲು ಕೃಷಿ ಅಧಿಕಾರಿಗಳಿಗೆ ಸೂಚನೆ



» ದಾವಣಗೆರೆ

ಮುಂಗಾರು ಹಂಗಾಮು ಆರಂಭವಾಗಿದ್ದು ರೈತರಿಗೆ ಬೇಕಾದ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆಯಾಗದಂತೆ ಕೃಷಿ ಅಧಿಕಾರಿಗಳು ನೋಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಸೂಚನೆ ನೀಡಿದರು.ಅವರು ಜೂನ್ 7 ರಂದು ನಗರದ ಕೃಷಿ ಇಲಾಖೆಯ ಆವರಣದಲ್ಲಿರುವ ರೈತ ಸಂಪರ್ಕ ಕೇಂದ್ರಕ್ಕೆ ಭೇಟಿ ನೀಡಿ ಉಗ್ರಾಣದಲ್ಲಿ ದಾಸ್ತಾನು ಮಾಡಲಾದ ಬಿತ್ತನೆ ಬೀಜದ ಉಗ್ರಾಣ ಪರಿಶೀಲನೆ ನಡೆಸಿ ರೈತರಿಗೆ ಬೀಜ ಗೊಬ್ಬರ ಕೊರತೆಯಾಗದಂತೆ ನೋಡಿಕೊಳ್ಳಿ ಎಂದು ಕೃಷಿ ಅಧಿಕಾರಿಗಳಿಗೆ ಸೂಚನೆ ನೀಡಿದರು. ರೈತ ಸಂಪರ್ಕ ಕೇಂದ್ರದಲ್ಲಿ ದಾಸ್ತನಾಗಿರುವ ಮೆಕ್ಕೆಜೋಳದ ಬಿತ್ತನೆ ಬೀಜಗಳನ್ನು ರೈತರಿಗೆ ವಿತರಿಸಿ ಸ್ಥಳದಲ್ಲಿದ್ದ ರೈತರೊಂದಿಗೆ ಕೃಷಿಯ ಬಗ್ಗೆ ಹಾಗೂ ಕುಂದು ಕೊರತೆ ವಿಚಾರಿಸಿ ನಂತರ ದಾವಣಗೆರೆ ನಗರದಲ್ಲಿರುವ ಕೇಂದ್ರ ಉಗ್ರಾಣ ನಿಗಮದ ವೇರ್ ಹೌ[illegible]ಗೆ ಭೇಟಿ ನೀಡಿ ಗೊಬ್ಬರದ ದಾಸ್ತಾನನ್ನು ಪರಿಶೀಲಿಸಿ ಕೃಷಿ ಅಧಿಕಾರಗಳೊಂದಿಗೆ ಚರ್ಚೆ ನಡೆಸಿ ರೈತರಿಗೆ ಸಮರ್ಪಕವಾಗಿ ಬೀಜ ಮತ್ತು ಗೊಬ್ಬರವನ್ನು ವಿತರಿಸುವಂತೆ ಹಾಗೂ ರೈತರಿಗೆ ಯಾವುದೇ ರೀತಿ ತೊಂದರೆ ಉಂಟಾಗದಂತೆ ಜನಪರವಾಗಿ ಹಾಗೂ ಜನಸ್ನೇಹಿಯಾಗಿ ಕಾರ್ಯನಿರ್ವಹಿಸುವಂತೆ ಕೃಷಿ ಅಧಿಕಾರಿಗಳಿಗೆ ಸೂಚಿಸಿದರು.

## ಪ್ರಮುಖ ಸುದ್ದಿ

### ಗೌರಸಮುದ್ರ ಶ್ರೀಮಾರಮ್ಮ ದೇವಿ ದೇವಸ್ಥಾನ ರಸ್ತೆಯಲ್ಲಿದ್ದ ಬಾವಿ ತಡೆಗೋಡೆ ಕುಸಿತ

# ಗ್ರಾಮಸ್ಥರ ಮನವಿಯಂತೆ ಬಾವಿಯನ್ನು ಮುಚ್ಚಿಸಿದ ಶಾಸಕ

» ಚಳ್ಳಕೆರೆ

ತಾಲ್ಲೂಕಿನ ತಳಕು ಹೋಬಳಿಯ ಗೌರಸಮುದ್ರ ಮಾರಮ್ಮ ದೇವಿ ನೆಲೆಸಿರುವ ಪುಣ್ಯ ಕ್ಷೇತ್ರದಲ್ಲಿ ಪ್ರತಿವರ್ಷ ವಿಶೇಷವಾದ ಜಾತ್ರೆ ಸಾವಿರಾರು ಭಕ್ತರ ಜಯಘೋಷಗಳೊಂದಿಗೆ ನಡೆಯುವುದು. ಆದರೆ, ಪ್ರತಿವರ್ಷವೂ ಈ ಜಾತ್ರೆಗೆ ಹೋಗುವ ಭಕ್ತರು, ವಾಹನ ಸವಾರರು ಅಪಾಯವನ್ನು ಲೆಕ್ಕಿಸದೆ ದೇವಿಯ ಮೇಲಿನ ಭಕ್ತಿಯಿಂದ ದರ್ಶನಕ್ಕೆ ತೆರಳುತ್ತಿದ್ದರು.

ತಳಕು, ಘಟಪರ್ತಿ, ಹೊನ್ನೂರು, ಗೌರಸಮುದ್ರ ಮೂಲಕ ಹಾದುಹೋಗುವ ರಸ್ತೆಯ ಪಕ್ಕದಲ್ಲಿ ಪುರಾತನ ಕಾಲದ ಆಳಾವಾದ ಕಲ್ಲಿನ ಕಟ್ಟಡ ಬಾವಿಯೊಂದು ಅಪಾಯಕ್ಕಾಗಿ ಕಾಯುತ್ತಿತ್ತು. ಸಾರ್ವಜನಿಕರ ಅನುಕೂಲಕ್ಕಾಗಿ ಬಾವಿಗೆ ತಡೆಗೋಡೆಯನ್ನು ನಿರ್ಮಿಸಲಾಗಿತ್ತು. ಆದರೆ, ಕಳೆದ ಮೇ ಅಂತ್ಯದಲ್ಲಿ ಭಾಗದಲ್ಲಿ ಸುರಿದ ಮಳೆಗೆ ತಡೆಗೋಡೆ ಹಾಗೂ ಬಾವಿಯ ಎರಡೂ ಕುಸಿದು ಬಿದ್ದು ರಸ್ತೆಯಲ್ಲಿ ಸಂಚಾರ ಮಾಡಲು ಪ್ರಾಣವನ್ನು ಕೈಯಲ್ಲಿಡಿದು ಸಾಗಬೇಕಿತ್ತು. ಗ್ರಾಪಂ





ಅಧ್ಯಕ್ಷ ಓಬಣ್ಣ, ಸದಸ್ಯರಾದ ಶಶಿಕುಮಾರ್, ಭಾಗ್ಯಮ್ಮಬೋಮ್ಮಣ್ಣ, ಎಂ.ಚಂದ್ರಣ್ಣ, ಟಿ.ಒ.ಬಾಬು, ಜಿ.ಬಿ.ಮೂರ್ತಿ ಮುಂತಾದವರು ಕ್ಷೇತ್ರದ ಶಾಸಕ ಎನ್. ವೈ.ಗೋಪಾಲಕೃಷ್ಣರವರಿಗೆ ಭೇಟಿ ಮಾಡಿ ಬಾವಿ ಕುಸಿದ ಬಗ್ಗೆ ಹಾಗೂ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆ ಬಗ್ಗೆ ಮನವಿ ಮಾಡಿ ಬಾವಿಯನ್ನು ಮುಚ್ಚಿಸುವಂತೆ ವಿನಂತಿಸಿದರು. ಗ್ರಾಮಸ್ಥರ ಒತ್ತಾಯದಂತೆ ಶಾಸಕ ಕೂಡಲೇ ಲೋಕೋಪಯೋಗಿ ಇಲಾಖೆಗೆ ಸೂಚನೆ ನೀಡಿ ಬಾವಿಯನ್ನು ಮುಚ್ಚುವಂತೆ ಆದೇಶಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರ ವಿಜಯ ಭಾಸ್ಕರ್ ಮತ್ತು ಸಿಬ್ಬಂದಿ ವರ್ಗ ಶಾಸಕರ ಸೂಚನೆಯಂತೆ ಇಲಾಖೆ ಅಧಿಕಾರಿಗಳ ಅನುಮತಿ ಪಡೆದು ಭಾನುವಾರ ಅಪಾಯಕ್ಕಾಗಿ ಕಾಯುತ್ತಿದ್ದ ಬಾವಿಯನ್ನು ಮುಚ್ಚುವ ಕಾರ್ಯಕ್ಕೆ ಮುಂದಾದರು. ತಮ್ಮ ಮನವಿಗೆ ಸಕರಾತ್ಮಕವಾಗಿ ಸ್ಪಂದಿಸಿದ ಶಾಸಕ ಎನ್.ವೈ.ಗೋಪಾಲಕೃಷ್ಣರವರಿಗೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಓಬಣ್ಣ, ಗ್ರಾಮಸ್ಥರು, ಭಕ್ತರು ಅಭಿನಂದನೆ ಸಲ್ಲಿಸಿದ್ದಾರೆ. ಪಿಡಿಓ ಹನುಮಂತರಾಯಸೇರಿದಂತೆ ಹಲವಾರು ಅಧಿಕಾರಿಗಳು ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### ಚಳ್ಳಕೆರೆ ಜಿಟಿಟಿಸಿ: ಎರಡು ಹೆಚ್ಚುವರಿ ಕೋರ್ಸ್ ಆರಂಭ

» **ಚಳ್ಳಕೆರೆ**



ನಗರದ ಬಳ್ಳಾರಿ ರಸ್ತೆಯಲ್ಲಿ ಕಳೆದ 2021ರಿಂದ ಆರಂಭವಾದ ಜಿಟಿಟಿಸಿ ಕೇಂದ್ರದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಸರ್ಕಾರ ಎರಡುಹೆಚ್ಚುವರಿಕೋರ್ಸ್‌ನ್ನು ಪ್ರಸ್ತುತ ವರ್ಷದಿಂದ ಜಾರಿಗೆ ಬರುವಂತೆ ಆದೇಶ ನೀಡಿದ್ದು, ಪ್ರತಿ ಕೋರ್ಸ್‌ನಲ್ಲೂ 60 ವಿದ್ಯಾರ್ಥಿಗಳಿಗೆ ಅವಕಾಶವಿದ್ದು ಇದನ್ನು ಸದುಪಯೋಗ ಪಡಿಸಿಕೊಳ್ಳುವಂತೆ ಪ್ರಾಂಶುಪಾಲ ಜಿ.ಆರ್.ತಿಪ್ಪೇಸ್ವಾಮಿ ತಿಳಿಸಿದ್ದಾರೆ. ಅವರು, ಪತ್ರಿಕೆಗೆ ಮಾಹಿತಿ ನೀಡಿ, ಕಳೆದ ಹಲವಾರು ವರ್ಷಗಳಿಂದ ರಾಜ್ಯದಲ್ಲಿ ಯುವಕರಿಗೆ ತರಬೇತಿ ನೀಡಿ ಉದ್ಯೋಗದ ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ. ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವ್ಯಾಪ್ತಿಯ ಸರ್ಕಾರಿ ಉಪಕರಣ ಮತ್ತು ತರಬೇತಿ ಕಾರ್ಯಗಾರ ತರಬೇತಿ ಕೇಂದ್ರದಲ್ಲಿ ಕ್ಷೇತ್ರದ ಶಾಸಕ ಟಿ.ರಘುಮೂರ್ತಿಯವರ ವಿಶೇಷ ಮನವಿಯನ್ನು ಪುರಸ್ಕರಿಸಿ ಸರ್ಕಾರ ಹೆಚ್ಚುವರಿಯಾಗಿ ಡಿಪ್ಲೊಮೊ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್, ಡಿಪ್ಲೊಮೊ ಇನ್ ಪ್ರಿಶಿಶನ್ ಮ್ಯಾನುಫ್ಯಾಕ್ಚರಿಂಗ್ ನೂತನ ಕೋರ್ಸ್‌ಗಳನ್ನು ಆರಂಭಿಸಲಾಗಿದೆ. ವಿದ್ಯಾರ್ಥಿಗಳು ಜೂನ್ 12ರಿಂದಲೇ ಅರ್ಜಿಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪ್ರಾಚಾರ್ಯರು ಜಿಟಿಟಿಸಿ ತರಬೇತಿ ಕೇಂದ್ರ ದೂರವಾಣಿ ಸಂಖ್ಯೆ 76250 08641, 76250 08643, 76250 08644 ಸಂಪರ್ಕಿಸಲು ಮನವಿ ಮಾಡಲಾಗಿದೆ.

### ಬಸವಜಯಂತಿ

» **ಚಳ್ಳಕೆರೆ**

ತಾಲ್ಲೂಕಿನ ತಳಕು ಹೋಬಳಿ ಮೈಲನಹಳ್ಳಿ ಗ್ರಾಮದಲ್ಲಿ ಜೂನ್-10ರ ಸೋಮವಾರ ಬಸವೇಶ್ವರ ಮೂರ್ತಿಪ್ರತಿಷ್ಠಾಪನೆ ಹಾಗೂ 891ನೇ ಬಸವ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಾಗಿ ರಾಷ್ಟ್ರೀಯ ಬಸವದಳದ ಮೈಲನಹಳ್ಳಿ ಅಧ್ಯಕ್ಷ ಹನುಮಂತರೆಡ್ಡಿ ತಿಳಿಸಿದ್ದಾರೆ. ಅವರು, ಈ ಬಗ್ಗೆ ಮಾಹಿತಿ ನೀಡಿ, ಗ್ರಾಮ ಪಂಚಾಯಿತಿ ಆವರಣದ ಬಸವ ಮಂಟಪದಲ್ಲಿ ಬೆಳಗ್ಗೆ 7.30ಕ್ಕೆ ಬಸವೇಶ್ವರ ಮೂರ್ತಿಪ್ರತಿಷ್ಠಾಪನಾ ಕಾರ್ಯ ನೆರವೇರಲಿದ್ದು, ಕೂಡಲಸಂಗಮದ ಶ್ರೀನಿರಂಜನ ಮಹಾಸ್ವಾಮೀಜಿ ಹಾಗೂ ಡಾ.ಗಂಗಾಮಾತಾಜಿ ದಿವ್ಯಸಾನಿಧ್ಯ ವಹಿಸುವರು.

## ಕೋಟಾ ಶ್ರೀನಿವಾಸ ಪೂಜಾರಿ ವಿರುದ್ಧ ಗೂಳಿಹಟ್ಟಿ ಶೇಖರ್ ಗಂಭೀರ ಆರೋಪ

# ಭೋವಿ ನಿಗಮದಲ್ಲಿ 100 ಕೋಟಿ ಅವ್ಯವಹಾರ

» **ಹೊಸದುರ್ಗ**

ಬಿಜೆಪಿ ಸರ್ಕಾರದ ಅವಧಿಯಲ್ಲಿ ಭೋವಿ ಅಭಿವೃದ್ಧಿ ನಿಗಮದಲ್ಲಿ 100 ಕೋಟಿ ಅವ್ಯವಹಾರ ನಡೆದಿದ್ದು, ಉಡುಪಿ-ಚಿಕ್ಕಮಗಳೂರು ನೂತನ ಸಂಸದ ಕೋಟಾ ಶ್ರೀನಿವಾಸ ಪೂಜಾರಿ ಅವರಿಗೆ ಲಂಚದ ಹಣ ಸಂದಾಯವಾಗಿದೆ ಎಂದು ಮಾಜಿ ಮಂತ್ರಿ ನಿಗಮದ ಮಾಜಿ ಅಧ್ಯಕ್ಷ, ಹೊಸದುರ್ಗದ ಮಾಜಿ ಶಾಸಕ ಗೂಳಿಹಟ್ಟಿ ಡಿ.ಶೇಖರ್ ಗಂಭೀರ ಆರೋಪ ಮಾಡಿದ್ದಾರೆ.

13 ನಿಮಿಷಗಳ ಆಡಿಯೊ ಹೇಳಿಕೆಯನ್ನು ಮಾಧ್ಯಮಗಳಿಗೆ ಬಿಡುಗಡೆ ಮಾಡಿರುವ ಗೂಳಿಹಟ್ಟಿ ಶೇಖರ್, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ಕೊನೆಯ ಮೂರು ತಿಂಗಳು ಭೋವಿ ಅಭಿವೃದ್ಧಿ ನಿಗಮ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಆಗ ಕೋಟಾ ಶ್ರೀನಿವಾಸ್ ಪೂಜಾರಿ ಅವರು ಬಿಜೆಪಿ ಅವಧಿಯಲ್ಲಿ ಸಚಿವರಾಗಿದ್ದಾಗ ಈ ಹಗರಣ ನಡೆದಿರುವುದು ಗಮನಕ್ಕೆ ಬಂದಿದ್ದು, ಇದರಲ್ಲಿ ಅವರು ಕೋಟ್ಯಂತರ ಹಣವನ್ನು ನುಂಗಿ ಹಾಕಿದ್ದಾರೆ. ಹಾಗಾಗಿ ಇದನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೇತೃತ್ವದಲ್ಲಿ ತನಿಖೆ ನಡೆಸುವಂತೆ ಒತ್ತಾಯಿಸಿದ್ದಾರೆ.

ಕೋಟ ಶ್ರೀನಿವಾಸ್ ಪೂಜಾರಿಯಂಥ ಪ್ರಾಮಾಣಿಕರು ಇಡೀ ದೇಶದಲ್ಲಿಲ್ಲ. ಅವರನ್ನು ಅತ್ಯಂತ ಪ್ರಾಮಾಣಿಕ ರಾಜಕಾರಣಿ ಎಂದು ಬಿಂಬಿಸಲಾಗಿದೆ. ಚುನಾವಣೆ ಸಂದರ್ಭದಲ್ಲಿ ಅವರಿಗೆ 50ಕೋಟಿಯಿಂದ 60 ಕೋಟಿಯಷ್ಟು ಹಣ ಎಲ್ಲಿಂದ ಬಂತು ಎನ್ನುವುದಕ್ಕೆ ಉತ್ತರ ಸಿಗಬೇಕಿದೆ. ಎಸ್ಟಿ ನಿಗಮ, ಭೋವಿ ನಿಗಮ ಎಲ್ಲ ಹಗರಣಗಳ ಬಗ್ಗೆ ತನಿಖೆ ಮಾಡಿ. ಆದರೆ ಪ್ರಕರಣದ ತನಿಖೆಯನ್ನು ಸಿಬಿಐ ಅಥವಾ ಸಿಐಡಿಗೆ ನೀಡುವುದರಿಂದ ಪ್ರಯೋಜನವಿಲ್ಲ. ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆಯಾದರೆ ಮಾತ್ರ ಸತ್ಯ ಬೆಳಕಿಗೆ ಬರುತ್ತದೆ ಎಂದಿದ್ದಾರೆ.

ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ಹಗರಣದ ಬಗ್ಗೆ ತನಿಖೆ ನಡೆಯುತ್ತಿದೆ. ಇಂತಹದೇ ಆರೋಪ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ವಿರುದ್ಧವೂ ಕೇಳಿಬಂದಿದೆ. ಆದರೆ ಕೇಸ್ ತನಿಖೆ ಮಾಡದೆ ಏಕೆ ಮುಚ್ಚಿ ಹಾಕಿದ್ದೀರಿ ಎಂದು ಪ್ರಶ್ನಿಸಿದ ಅವರು, ದೂರುದಾರ ಮಹಿಳೆ ಸಾವಿಗೀಡಾದ ಸುದ್ದಿ ಎಲ್ಲೆಡೆ ಬಂದಿದ್ದರೂ, ಸಾವಿನ ಬಗ್ಗೆ ಅನುಮಾನಗಳಿದ್ದರೂ ಈ ಬಗ್ಗೆ ಏಕೆ ತನಿಖೆ ನಡೆಯುತ್ತಿಲ್ಲ. ಪ್ರಜ್ವಲ್ ಕೇಸ್ ಮಾತ್ರ ಏಕೆ ತನಿಖೆ ಮಾಡುತ್ತೀರಾ. ವಿಜಯೇಂದ್ರಣ್ಣ, ಅಶೋಕಣ್ಣ ಧೈರ್ಯ ಇದ್ದರೆ ಜಡ್ಜ್ ಮೂಲಕ ತನಿಖೆ ಮಾಡಿಸಿ ಎಂದು ಗೂಳಿಹಟ್ಟಿ ಶೇಖರ್ ಕಿಡಿ ಕಾರಿದ್ದಾರೆ.ಲಿಂಗಾಯತರನ್ನು ಸೇರಿ ಜಾತಿಗೊಂದು ನಿಗಮ ಮಾಡಿ ಚಿಂದಿ ಚಿತ್ರಾನ್ನ ಮಾಡಿದ್ದಾರೆ. ಭೋವಿ ನಿಗಮ ಮಾಡಿ ಒಬ್ಬರ ಅಧ್ಯಕ್ಷರು, 5 ಜನರನ್ನು ನಿರ್ದೇಶಕರನ್ನು ಮಾಡಿದ್ದಾರೆ. ಜಾತಿಗೊಂದರಂತೆ ಸ್ಥಾಪಿಸಿದ ಅಭಿವೃದ್ಧಿ ನಿಗಮಗಳಲ್ಲಿ ಇಂತಹ ಅವ್ಯಹಾರ ಮಾಮೂಲಿ ಆಗಿದೆ. ನಾನು ಸಚಿವನಾಗಿದ್ದ ಸಮಯದಲ್ಲಿ ಒಂದೊಂದು ಸಮಾಜಕ್ಕೆ 10 - 15 ಬೋರ್ವೆಲ್ ಕೊಡುತ್ತಿದ್ದೆವು. ಆದರೆ, ಈಗ ಎಲ್ಲಾ ಸಮಾಜಕ್ಕೂ ಕೇವಲ ಒಂದೊಂದು ಬೋರ್, ಕಾರು ಸಿಗುತ್ತಿದೆ. ರಾಜ್ಯದಲ್ಲಿ ಈಗ ಎಂಎಲ್ಎ ಗಳು ತಲೆ ಎತ್ತಲು ಸಾಧ್ಯವಾಗುತ್ತಿಲ್ಲ ಎಂದಿದ್ದಾರೆ.

ಭೋವಿ ಅಭಿವೃದ್ಧಿ ನಿಗಮದಲ್ಲಿನ ಹಗರಣ ಹಿಂದೆ ಭೋವಿ ಸಮಾಜದ ಮುಖಂಡರ ಪಾತ್ರವೂ ಇದೆ. ಸಮಾಜದ ಫಲಾನುಭವಿಗಳಿಗೆ ಒಂದು ರೂಪಾಯಿ ಕೂಡ ತಲುಪಿಲ್ಲ. ನಮ್ಮ ಸಮಾಜದ ಎಂಎಲ್‌ಸಿ ಪುತ್ರ ಕೂಡಾ 30 ಕೋಟಿ ರೂ. ನುಂಗಿದ್ದಾರೆ. ವಿವೇಚನಾ ಕೋಟಾದಡಿ ಸಚಿವರಿಗೆ ಶೇ.15, ಅಧ್ಯಕ್ಷರು ಮತ್ತು ಅಧಿಕಾರಿಗಳಿಗೆ ಶೇ. 5ರಷ್ಟು ನಿಗದಿಪಡಿಸಲಾಗಿದೆ ಎಂಬುದನ್ನು ನನ್ನ ಅನುಭವದಿಂದ ಹೇಳುತ್ತಿದ್ದೇನೆ. ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಈ ಪ್ರಕರಣವನ್ನು ಸಿಐಡಿಗೆ ನೀಡಿದ್ದರು. ಆದರೆ ಸಿದ್ದರಾಮಯ್ಯ ಸಿಎಂ ಆದ ಬಳಿಕ ಸಚಿವ ಮಹದೇವಪ್ಪ ಬಂದಾಗ ಈ ತನಿಖೆ ಸ್ಥಗಿತಗೊಂಡಿದೆ. ಏಕೆ ಹೀಗೆ ಮಾಡಿದ್ದೀರಿ ಎಂದು ಪ್ರಶ್ನಿಸಿದ ಗೂಳಿಹಟ್ಟಿ ಶೇಖರ್, ಈಗಲಾದರೂ ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ್ ಸಾಹೇಬರೇ ತನಿಖೆ ಶುರು ಮಾಡಿಸಿ ಎಂದು ಗೂಳಿಹಟ್ಟಿ ಶೇಖರ್ ಆಗ್ರಹಿಸಿದ್ದಾರೆ.

### ನಾಗೇಂದ್ರ ತಲೆದಂಡ ಗೂಳಿಹಟ್ಟಿ ಆರೋಪ

ವಾಲ್ಮೀಕಿ ನಿಗಮದಲ್ಲಿ ನಡೆದಿದೆ ಎನ್ನಲಾದ ಕೋಟ್ಯಾಂತರ ರೂಪಾಯಿ ಅವ್ಯವಹಾರ ಪ್ರಕರಣದಲ್ಲಿ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವ ಬಿ.ನಾಗೇಂದ್ರ ಅವರ ರಾಜೀನಾಮೆಗೆ ಬಿಜೆಪಿ ಪಟ್ಟು ಹಿಡಿದಿತ್ತು. ಈ ಹಿನ್ನೆಲೆಯಲ್ಲಿ ಗುರುವಾರ ರಾತ್ರಿ ಸಿಎಂ ಸಿದ್ದರಾಮಯ್ಯ ಭೇಟಿ ಮಾಡಿದ ನಾಗೇಂದ್ರ ಅವರು ತನ್ನ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಆದರೆ ಇಂತಹ ಸಂದರ್ಭದಲ್ಲಿ ಗೂಳಿಹಟ್ಟಿ ಶೇಖರ್ ಮಾಡಿದ ಗಂಭೀರ ಆರೋಪ ರಾಜ್ಯಾದ್ಯಂತ ಸಂಚಲನವುಂಟು ಮಾಡಿದೆ. ಜೊತೆಗೆ ಇವರಿಗೆ ಸಿಗುವುದೆಲ್ಲಾ ಬರಿ ಎಸ್ಸಿ-ಎಸ್ಟಿಗಳೇ ಎಂದು ಪ್ರಶ್ನಿಸಿದ್ದಾರೆ. ಹಿಂದುಳಿದವರು ಕರ್ಮ ಮಾಡಿ ಹುಟ್ಟಿದ್ದಾರೆ ಎಂದು ಗೂಳಿಹಟ್ಟಿ ಶೇಖರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ."





## ದಾಖಲೆ ಕೇಳಿದ ಮಾಜಿ ಸಚಿವ

» **ಹೊಸದುರ್ಗ**

ಕಳೆದ ನಾಲ್ಕು ದಿನಗಳ ಹಿಂದೆ ಭೋವಿ ನಿಗಮದ ಹಗರಣದ ಆಡಿಯೋ ಬಿಡಿಗಡೆ ಮಾಡಿದ್ದ ಮಾಜಿ ಮಂತ್ರಿ ಗೂಳಿಹಟ್ಟಿಶೇಖರ್ ಇದೀಗ ಶನಿವಾರ ಮತ್ತೊಂದು ಆಡಿಯೋ ಬಿಡುಗಡೆ ಮಾಡಿದ್ದಾರೆ. ಕಳೆದ ಬಿಜೆಪಿ ಸರ್ಕಾರದ ಅವಧಿಯ ಹಗರಣ ತನ್ನದೇ ವಾಟ್ಸಪ್ ಸ್ಟೇಟಸ್‌ಗೆ ಆಡಿಯೋ ಹಾಕಿದ್ದ ಗೂಳಿಹಟ್ಟಿ ಹಾಲಿ ಸಂಸದ , ಮಾಜಿ ಸಚಿವ ಕೋಟ ಶ್ರೀನಿವಾಸ್ ಪೂಜಾರಿ ಹೆಸರು ಪ್ರಸ್ತಾಪ ಮಾಡಿದ್ದರು

ಇದೀಗ ಗೂಳಿಹಟ್ಟಿ ಶೇಖರ್ ಶನಿವಾರ ಮತ್ತೊಂದು ಆಡಿಯೋ ಬಿಡುಗಡೆಯಾಗಿರುವ ಆಡಿಯೋದಲ್ಲಿ ನಾನು ಯಾರಿಗೂ ಅವಮಾನಿಸುವ ರೀತಿಯಲ್ಲಿ ಮಾತನಾಡಿಲ್ಲ.ಆತರ ಯಾರಿಗಾದ್ರು ಮನಸ್ಸಿಗೆ ನೋವು ಆಗಿದ್ದರೆ ಬಹಿರಂಗ ಕ್ಷಮೆ ಕೇಳುವೆ ಎಂದು ಹೇಳಿರುವ ಗೂಳಿಹಟ್ಟಿ ಭೋವಿ ನಿಗಮ ಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ದಾಖಲೆ ಕೇಳಿದ್ದಾರೆ.ಭೋವಿ ನಿಗಮಕ್ಕೆ 2018-19 ರಲ್ಲಿ 127 ಕೋಟಿ, 2019-20 ರಲ್ಲಿ 119 ಕೋಟಿ ಹಣ ಬಂದಿತ್ತು.2020 -21 ನೇ ಸಾಲಿನಲ್ಲಿ 106 ಕೋಟಿ ಸರ್ಕಾರದಿಂದ ಬಂದಿತ್ತು.2021-22ರಲ್ಲಿ 40 ಕೋಟಿ, 2022-23 ರಲ್ಲಿ 107 ಕೋಟಿಒಟ್ಟು 499 ಕೋಟಿ ಹಣ ಬಿಡುಗಡೆ ಮಾಡಲಾಗಿತ್ತು ಇದು ಕೇವಲ ಉದಾಹರಣೆಗೆ ಭೋವಿ ನಿಗಮದ್ದು ಮಾತ್ರ ಹೇಳುತ್ತಿದ್ದೇನೆ ಎಂದು ಹೇಳಿರುವ ಅವರು 2018-19 ರಲ್ಲಿ ಸಾರ್ವಜನಿಕ ಹಣ 127 ಕೋಟಿ ಹಣ ಕೊಟ್ಟಿದ್ದರು. ಕ್ರೀಯಾ ಯೋಜನೆ ರೂಪಿಸುವ ವೇಳೆ 127 ಕೋಟಿ ಮಾಡಬೇಕಿತ್ತು. ಸರ್ಕಾರವೇ ಎಲ್ಲಾ ನಿಗಮಕ್ಕೂ ಗೈಡ್ ಲೈನ್ಸ್ ಕೊಡಲಾಗಿದೆ ಎಂದು ಹೇಳೀರುವ ಅವರು 127 ಕೋಟಿಯಲ್ಲಿ 10 ಕೋಟಿ ರೂಪಾಯಿ 1 ಲಕ್ಷದಂತೆ ಲೋನ್ ಕೊಡಬಹುದು.

20 ಕೋಟಿಯಲ್ಲಿ 2 ಲಕ್ಷ ರೂಪಾಯಿ ನೇರ ಸಾಲ ಕೊಡಬಹುದು.10 ಕೋಟಿಯಲ್ಲಿ ಮಹಿಳೆಯರಿಗೆ ಸಂಘದ ಲೋನ್ ಕೊಡಬಹುದು.ಅದೇ ರೀತಿ 20 ಕೋಟಿಯಲ್ಲಿ 3.5 ಲಕ್ಷ ಲೋನ್ ವಾಹನ ಲೋನ್ ಕೊಡಬಹುದು ಇನ್ನು ಗಂಗಾ ಕಲ್ಯಾಣಕ್ಕೆ 30 ಕೋಟಿ ಯೋಜನೆ ಇಟ್ಟುಕೊಂಡರೆ 15-20 ಕೋಟಿ ಭೂ ಒಡೆತನ ಯೋಜನೆ ಖರ್ಚಾಗುತ್ತದೆ.ಎಲ್ಲವೂ ಸೇರಿ 100 ಕೋಟಿ ಯೋಜನೆ ಆಯ್ತು. ಎಂದು ವಿವರ ನೀಡಿರುವ ಗೂಳಿಹಟ್ಟಿ 100 ಕೋಟಿಗೆ ಕ್ರೀಯಾ ಯೋಜನೆ ರೂಪಿಸಬೇಕು ಎಂದು ಪ್ರಾಸ್ತಾಪಿಸಿರುವ ಅವರು ಇದರಲ್ಲಿ 20% ಹಣ ವಿವೇಚನಾ ಕೋಟಾ ಮಂತ್ರಿ ಅವರಿಗೆ 15% ಇರುತ್ತದೆ.

ಈಡೀ ರಾಜ್ಯದಲ್ಲಿ ಎಲ್ಲಿ ಬೇಕಾದರೂ ಮಂತ್ರಿ ನೀಡಬಹುದು.5% ನಿಗಮದ ಅಧ್ಯಕ್ಷರು ಎಲ್ಲಿ ಬೇಕಾದರೂ ಕೊಡಬಹುದು.


ಹಣ ಖರ್ಚಾದ ಬಳಿಕ ವಿವೇಚನಾ ಕೋಟಾ ಬಳಸಲು ಮಂತ್ರಿಗೆ ಹಣ ಇರಲ್ಲ, ಆದರೆ ಈ ಸಮಯದಲ್ಲಿ ಹಣ ಮಿಸ್ ಯೂಸ್ ಮಾಡಿದ್ದಾರೆ ಎಂದು ಆರೋಪಿಸಿರುವ ಗೂಳಿಹಟ್ಟಿ 80% ಹಣ ಒಐಂ ಗಳು ಆಯ್ಕೆ ಮಾಡಲಾಗುತ್ತದೆ. ವಿವೇಚನಾ ಕೋಟಾದ ಹಣ ದುರ್ಬಳಕೆ ಆಗಿರಬಹುದು, ಇಬ್ಬರು, ಮೂವರು ಮಂತ್ರಿ ಆದಾಗ ಹಣ ದುರ್ಬಳಕೆ ಆಗಿರುತ್ತದೆ ಎಂದು ಆರೋಪಿಸಿರು ಅವರು ಅದು ಯಾರ ಅವಧಿಯಲ್ಲಿ ದುರ್ಬಳಕೆ ಆಗಿದೆ ಎಂದು ಪತ್ತೆ ಹಚ್ಚಬೇಕು ಎಂದು ಸರ್ಕಾರವನ್ನ ಆಗ್ರಹಿಸಿದ್ದಾರೆ..

ಯಾರ ಮೇಲೂ ಕೂಡಾ ನಾನು ಆಪಾದನೆ ಮಾಡಿಲ್ಲ, ಆದರೆ ಪರಿಶೀಲನೆ ಮಾಡಿದ್ದೇನೆ. ಹೊರ ಗುತ್ತಿಗೆ ನೌಕರಿಗೆ 1.94 ಕೋಟಿ ಅನಿಕಾ ಎಂಟರ್ ಪ್ರೈಸಸ್‌ಗೆ ಹಣ ಹೋಗಿದೆ. ಯಾಕೆ ಹಣ ಕೊಟ್ಟಿದ್ದಾರೆ, ಎಲ್ಲಿಗೆ ಹಣ ಹೋಗಿದೆ? ಕೊವೀಡ್ ವೇಳೆ 1.78 ಕೋಟಿ ಹಣ ಸಾಯಿ ಥೆರಪಿಸ್ಟ್ ಸಂಸ್ಥೆಗೆ ಹಾಕಿದ್ದಾರೆ.ಈ ಸಂಸ್ಥೆ ಯಾರದ್ದು, ಯಾಕೆ ಹಣ ಹಾಕಿದ್ದಾರೆ? ಭೋವಿ ನಿಗಮಕ್ಕೂ ಸಾಯಿ ಥೆರಪಿಸ್ಟ್ ಗೂ ಏನ್ ಸಂಬಂಧ? ಬೆಡ್ ಖರೀದಿಗೆ 1.78 ಕೋಟಿ ಹಣ ಎಂದು ತೋರಿಸಿದ್ದಾರೆ. 1.78 ಕೋಟಿ ಹಣ ಎಲ್ಲಿ ಹೋಯ್ತು, ಬೆಡ್ ಗೂ ನಮ್ಮ ಸಮಾಜಕ್ಕೂ ಏನ್ ಸಂಬಂಧ. ಸಾಂಸ್ಥಿಕ ಕೋಟಾದಡಿಯಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಲಾಗಿದೆ?

ಹೈಸ್ಕೂಲ್ ಶಿಕ್ಷಕರಿಗೆ ಶಾಲಾ ಅವಧಿ ಮುಗಿದ ಬಳಿಕ ಜಿಲ್ಲಾ ವ್ಯವಸ್ಥಾಪಕರಾಗಿ ಕೆಲಸ ಮಾಡಬೇಕು. ಇಂಜಿನಿಯರ್ ಅವರನ್ನ ಭೋವಿ ನಿಗಮಕ್ಕೆ ಹಾಕಿದ್ದಾರೆ. ಒಂದೇ ಒಂದು ಪೇಪರ್ ನಲ್ಲಿ ದಾಖಲೆಗಳಿಲ್ಲ. ಬೊಮ್ಮಾಯಿ ಸಾಹೇಬ್ರು ಇದನ್ನ ತನಿಖೆಗೆ ಕೊಟ್ಟಿದ್ದಾರೆ- ಧನ್ಯವಾದಗಳು ಇದರ ಬಗ್ಗೆ ನಾನು ಮಾಹಿತಿ ಕೇಳುತ್ತಿದ್ದೇನೆ. ನಾನು ನಿಗಮದ ಅಧ್ಯಕ್ಷರಾದ ಬಳಿಕ ಹಣ ವಾಪಸ್ ಕಟ್ಟಲು ಸೂಚಿಸಿದ್ದೆ. ಸಿ ಎಂ ಸಿದ್ದರಾಮಯ್ಯ ಮತ್ತು ಪರಮೇಶ್ವರ್ ಸಾಹೇಬ್ರಿಗೆ ಮನವಿ ಪತ್ರ ಕೊಟ್ಟಿದ್ದೇವೆ. 1 ಕೋಟಿ 78 ಲಕ್ಷ ಬೆಡ್ ಗೆ ನಿಗಮದ ಹಣ ಖರ್ಚಾಗಿದೆ. ಎಲ್ಲಾ ನಿಗಮಗಳದ್ದು ಕೂಡಾ ಇದೇ ಕಥೆಯಾಗಿದೆ. ಮಂತ್ರಿಗಳು ಸೇರಿದಂತೆ ನಾನು ಯಾರ ಮೇಲೆಯೂ ಕೂಡಾ ನಾನು ಆಪಾದನೆ ಮಾಡಿಲ್ಲ. ಕೋಟಾ ಶ್ರೀನಿವಾಸ್ ಪೂಜಾರಿ ಬಗ್ಗೆ ಕೂಡಾ ಗೌರವ ಇದೆ. ಹೆಚ್ಚುವರಿ ಹಣ ಸಿಎಂ ಅವರನ್ನ ಕೇಳಿದ್ರೆ ಕೊಡ್ತಾ ಇದ್ರು, ಆದರೆ ವಿವೇಚನಾ ಕೋಟಾ ದುರ್ಬಳಕೆ ಆಗಿದೆ.ಗುಲ್ಬರ್ಗ, ರಾಯಚೂರಿಗೆ ತಲಾ 20 ಕೋಟಿ ಹಣ ನೀಡಿದ್ದಾರೆ.ವಿವೇಚನಾ ಕೋಟಾ ಎಂದು ಹಣ ಬಿಡುಗಡೆ ಮಾಡಿದ್ದಾರೆ. ಫಲಾನುಭವಿಗಳ ಹಣ ಕೂಡಾ ಇವರೇ ಡ್ರಾ ಮಾಡಿದ್ದಾರೆ.

ರೇಷನ್ ಅಂಗಡಿ ಎಂದು ಮಾಲೀಕನಿಗೆ 10 ಲಕ್ಷ ಹಾಕಿ. 25 ಸಾವಿರ ಮಾಲೀಕನಿಗೆ ಕೊಟ್ಟು, ಉಳಿದ ಎಲ್ಲ ಹಣ ವಾಪಸ್ ಹಾಕಿಸಿಕೊಂಡಿದ್ದಾರೆ.ಇದೆಲ್ಲವನ್ನ ಸರ್ಕಾರ ಕೂಡಲೇ ತನಿಖೆ ಮಾಡಬೇಕು ಎಂದು ಗೂಳಿಹಟ್ಟಿಶೇಖರ್ ಸರ್ಕಾರವನ್ನ ಆಗ್ರಹಿಸಿದ್ದಾರೆ






# ತಂದೆಯ ದಿನಾಚರಣೆ ಇತಿಹಾಸ

ಅದು ತನ್ನ ಮಕ್ಕಳನ್ನು ಎಷ್ಟು ದೂರವಾದರೂ ಲೀಲಾಜಾಲವಾಗಿ ಹೊರಬಲ್ಲುದು. ತಂದೆಯ ಕೈಗಳು ಸಾಮಾನ್ಯವಾದುದಲ್ಲ. ಅವು ತನ್ನ ಕುಟುಂಬ ಎಷ್ಟೇ ದೊಡ್ಡದಿದ್ದರೂ ದುಡಿದು ಅವರನ್ನೆಲ್ಲ ಸಾಕಿ ಸಲಹಬಲ್ಲುದು. ಸಂಜೆ ಮನೆಗೆ ಮರಳುವ ತಂದೆಯ ಚೀಲದಲ್ಲಿ ಇರುವ ದಿನಸಿ, ತರಕಾರಿ, ಚಾಕಲೇಟುಗಳ ಜತೆ ಅವನು ಹೃದಯದಲ್ಲಿ ತುಂಬಿ ತರುವ ಪ್ರೀತಿಯೂ ಅಗಾಧವಾದುದು. ಅಂಥ ತಂದೆಯ ದಿನ (Father's

ವಾರ್ಷಿಕವಾಗಿ ಜೂನ್ ತಿಂಗಳ ಮೂರನೇ ಭಾನುವಾರದಂದು ಪ್ರಪಂಚದಾದ್ಯಂತ ತಂದೆಯ ದಿನವನ್ನು ಪ್ರೀತಿಯಿಂದ ಆಚರಿಸಲಾಗುತ್ತದೆ. ಈ ದಿನ ನಮ್ಮ ಜೀವನದಲ್ಲಿ ತಂದೆ ಅಥವಾ ತಂದೆಯಂಥ ವ್ಯಕ್ತಿಗಳ ಕೊಡುಗೆ ಗೌರವಿಸಲು ಮೀಸಲು. ಅವರು ನಮ್ಮನ್ನು ಬೆಳೆಸಲು ಮಾಡುವ ತ್ಯಾಗವನ್ನು ಗೌರವಿಸುವ ದಿನ. ತಂದೆ ನಾವು ನಮ್ಮ ಜೀವನದಲ್ಲಿ ನೋಡುವ ಮೊದಲ ಹೀರೋ. ನಮ್ಮ ಯಾವುದೇ ಸಾಧನೆಗೆ ಆತ ಬೆನ್ನೆಲುಬು. ನಮ್ಮನ್ನು ಎತ್ತಿ ಹಿಡಿದು ಸಮುದ್ರವನ್ನೂ ಬೆಟ್ಟಗಳನ್ನೂ ಆತ ತೋರಿಸಬಲ್ಲ. ಮೌನವಾಗಿ ನಮಗೆ ಶಕ್ತಿಯನ್ನು ಕಲಿಸುವ ಭುಜಗಳು ಆತನವು. ಕುಟುಂಬದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಆತ ಪ್ರವೀಣ.

ಭಾರತ, ಯುನೈಟೆಡ್ ಸ್ಟೇಟ್ಸ್, ಕೆನಡಾ, ಯುನೈಟೆಡ್ ಕಿಂಗ್‌ಡಮ್, ಅರ್ಜೆಂಟೀನಾ, ಕೆನಡಾ, ಫ್ರಾನ್ಸ್, ಗ್ರೀಸ್, ಐರ್ಲೆಂಡ್, ಮೆಕ್ಸಿಕೊ, ಪಾಕಿಸ್ತಾನ, ಸಿಂಗಾಪುರ್, ದಕ್ಷಿಣ ಆಫ್ರಿಕಾ, ವೆನೆಜುವೆಲಾದಲ್ಲಿಯೂ ತಂದೆಯರ 18/06/ ದಿನ ಇಂದೇ.

ತಂದೆಯ ದಿನಾಚರಣೆ ಇತಿಹಾಸ


ಅಮೆರಿಕದಲ್ಲಿ ನಡೆದ ಅಂತರ್ಯುದ್ಧದಲ್ಲಿ ಭಾಗವಹಿಸಿದ ಯೋಧ, ಹುತಾತ್ಮ ವಿಲಿಯಂ ಜಾಕ್ಸನ್ ಸ್ಮಾರ್ಟ್ ಅವರ ಮಗಳು ಈ ದಿನಾಚರಣೆಯ ರೂಢಿಗೆ ಮೂಲ ಬೀಜ ಬಿತ್ತಿದವಳು. ಈಕೆ ತನ್ನ ತಂದೆ ಸೇರಿದಂತೆ ಪ್ರಪಂಚದಾದ್ಯಂತದ ಎಲ್ಲಾ ತಂದೆಗಳಿಗೆ ನಮನ ಸಲ್ಲಿಸಲು ಬಯಸಿದಳು. ಈಕೆಯ ಹೆಸರು ಸೊನೊರಾ ಸ್ಮಾರ್ಟ್ ಡಾಡ್. ಈಕೆಯ ತಂದೆ ಆರು ಮಕ್ಕಳಿಗೆ ಸಿಂಗಲ್ ಫಾದರ್ ಆಗಿದ್ದ. ತಂದೆಯ ದಿನವನ್ನು ಆಚರಿಸಲು ಅವರ ಜನ್ಮದಿನವನ್ನೇ (ಜೂನ್ 5, 1982) ಆಕೆ ಆಯ್ಕೆ ಮಾಡಿದಳು. ಅವಳಿಗೆ ಸ್ಫೂರ್ತಿಯಾಗಿ ಇದ್ದವಳು "ತಾಯಿಯ ದಿನ"ದ ಸಂಸ್ಥಾಪಕಿ ಅನ್ನಾ ಜಾರ್ವಿಸ್.

ಆದರೆ ಚರ್ಚ್ ಅವಳ ಮನವಿಯನ್ನು ಬೆಂಬಲಿಸಲಿಲ್ಲ. ಕೊನೆಗೆ ಆಕೆ ಬೆಂಬಲಕ್ಕಾಗಿ ಹಲವಾರು ಇತರ ಸ್ಥಳೀಯ ಚರ್ಚುಗಳನ್ನು ಒಟ್ಟುಗೂಡಿಸಿದಳು. ಅಂತಿಮವಾಗಿ, ತಂದೆಯ ದಿನಾಂಕವನ್ನು ಜೂನ್ 5ರಿಂದ ಜೂನ್ ಮೂರನೇ ಭಾನುವಾರಕ್ಕೆ ತಳ್ಳಲಾಯಿತು. 1910ರಲ್ಲಿ, ಮೊದಲ ಬಾರಿಗೆ ತಂದೆಯ ದಿನವನ್ನು ಗುರುತಿಸಲಾಯಿತು.


ತಂದೆಯ ದಿನವು ತಂದೆ ಮತ್ತು ಮಗುವಿಗೂ ಮಹತ್ವದ ಸಂಗತಿ. ಮಕ್ಕಳು ತಮ್ಮ ತಂದೆಯ ಪ್ರೀತಿಗಾಗಿ, ಸದಾ ತಮ್ಮ ಜೀವನದಲ್ಲಿ ಅವರ ಉಪಸ್ಥಿತಿಗಾಗಿ, ಅವರ ಭಾವನಾತ್ಮಕ ಬೆಂಬಲಕ್ಕಾಗಿ, ಜೀವನದಲ್ಲಿ ಅವರ ಪಾತ್ರಕ್ಕಾಗಿ, ಮಾನಸಿಕ ಅಥವಾ ಆರ್ಥಿಕ ಸಹಾಯಕ್ಕಾಗಿ ಕೃತಜ್ಞತೆಯನ್ನು ತೋರಿಸಲು ಇರುವ ಅವಕಾಶವಿದು. ಜಗತ್ತಿನಾದ್ಯಂತ ಮಕ್ಕಳು ತಾವೇ ಕೈಯಿಂದ ಮಾಡಿದ ಉಡುಗೊರೆಗಳು ಅಥವಾ ಕಾರ್ಡ್‌ಗಳು, ಖರೀದಿಸಿದ ಅರ್ಥಪೂರ್ಣ ಉಡುಗೊರೆಗಳು, ತಾವೇ ಮಾಡಿದ ಕೇಕ್, ಅವರ ನೆಚ್ಚಿನ ಖಾದ್ಯ, ಹೂವು ಮತ್ತು ಚಾಕೊಲೇಟ್ ಇವನ್ನೆಲ್ಲ ತಂದೆಗೆ ಗಿಫ್ಟ್ ಮಾಡುತ್ತಾರೆ. ಅವರ ನೆಚ್ಚಿನ ರೆಸ್ಟೋರೆಂಟ್‌ಗಳಿಗೆ ಕರೆದೊಯ್ಯುತ್ತಾರೆ. ಒಳ್ಳೆಯ ಸಮಯವನ್ನು ಒಟ್ಟಿಗೆ ಕಳೆಯುತ್ತಾರೆ. ಸರ್‌ಪ್ರೈಸ್ ಗಿಫ್ಟ್ ನೀಡುತ್ತಾರೆ.ಹೆಚ್ಚಿನ ಮಕ್ಕಳು ತಮ್ಮ ತಾಯಿಯೊಂದಿಗೆನ ನಿಕಟ ಬಾಂಧವ್ಯ ಹೊಂದಿರುತ್ತಾರೆ,. ಕೆಲವೊಮ್ಮೆ ತಂದೆ ಭಾವನಾತ್ಮಕವಾಗಿ ದೂರವೇ ಇರುತ್ತಾನೆ. ಆದರೆ ಅವನು ದುಡಿಯುವಿಕೆಯಲ್ಲಿ ಮಕ್ಕಳೊಂದಿಗೆ ಸಮಯ ಕಳೆಯಲು, ಪ್ರೀತಿ ತೋರಿಸಲು ಮರೆತೇ ಬಿಡುತ್ತಾನೆ. ಆದರೆ ಕುಟುಂಬಕ್ಕೆ, ಮಕ್ಕಳಿಗೆ ಅವನ ಕೊಡುಗೆ ಸಣ್ಣದಲ್ಲ. ಅವನು ದೂರವೇ ಇದ್ದರೂ ಅವನ ಹೃದಯ ಮಕ್ಕಳಿಗಾಗಿ ಮಿಡಿಯುತ್ತಿರುತ್ತದೆ. ಇಂಥ ತಂದೆಯರಿಗೆ ಈ ದಿನ ಅರ್ಪಣೆ.

(ಸಂಗ್ರಹ )

# ಸಾವುಗಳು ಸಹಜ ಆಗುತ್ತಾ



ಸಂವೇದನೆಗಳು ಸರ್ವನಾಶವಾಗುತ್ತಾ,
ಭಾವನೆಗಳು ಬರಿದಾಗುತ್ತಾ,
ಮಾತುಗಳು ಕೃತಕವಾಗುತ್ತಾ,
ಅಕ್ಷರಗಳು ಅಸಹನೀಯವಾಗುತ್ತಾ,
ಮನಸುಗಳು ಮಲಿನವಾಗುತ್ತಾ,
ಸಂಬಂಧಗಳು ಶಿಥಿಲವಾಗುತ್ತಾ,
ಮೌಲ್ಯಗಳು ಮಸುಕಾಗುತ್ತಾ,
ಆಡಳಿತ ಅರಾಜಕತೆಯಾಗುತ್ತಾ,
ಬದುಕು ಬರಡಾಗುತ್ತಾ,
ಸಮಾಜ ಅಸ್ತವ್ಯಸ್ತವಾಗುತ್ತಾ,
ಪರಿಸರ ಕಲ್ಮಶವಾಗುತ್ತಾ,
ವಿದ್ಯೆ ವ್ಯಾಪಾರವಾಗುತ್ತಾ,
ವಿವೇಚನೆ ವಿಕಾರವಾಗುತ್ತಾ,
ಆರೋಗ್ಯ ಅನಾರೋಗ್ಯವಾಗುತ್ತಾ,
ಗಂಡನ್ನು ಅನುಮಾನಿಸುತ್ತಾ,
ಹೆಣ್ಣನ್ನು ಅವಮಾನಿಸುತ್ತಾ,
ಹಣವನ್ನು ಪೂಜಿಸುತ್ತಾ,
ಅಧಿಕಾರವನ್ನು ಆರಾಧಿಸುತ್ತಾ,
ಭ್ರಮೆಗಳನ್ನು ಸೃಷ್ಟಿಸುತ್ತಾ,
ಅಮಾಯಕರನ್ನು ಶೋಷಿಸುತ್ತಾ,
ಅಸಹಾಯಕರನ್ನು ವಂಚಿಸುತ್ತಾ,
ಭ್ರಷ್ಟರನ್ನು ಚುನಾಯಿಸುತ್ತಾ,
ವಿಧಿಯನ್ನು ಅಳಿಯುತ್ತಾ,
ಕಾಣದ ಶಕ್ತಿಯನ್ನು ನಂಬುತ್ತಾ,
ಆತ್ಮ ಶಕ್ತಿಯನ್ನು ನಿರ್ಲಕ್ಷಿಸುತ್ತಾ,
ಆತ್ಮವಂಚನೆಗೆ ಬಲಿಯಾಗುತ್ತಾ,
ಆಡಂಬರಕೆ ಆಕರ್ಷಿತವಾಗುತ್ತಾ,
ಪ್ರೀತಿಗೆ ಹಂಬಲಿಸುತ್ತಾ,
ದ್ವೇಷಕ್ಕೆ ಬಲಿಯಾಗುತ್ತಾ,
ಒಳ್ಳೆಯದನ್ನು ಹುಡುಕುತ್ತಾ,
ಕೆಟ್ಟದ್ದನ್ನು ಅನುಸರಿಸುತ್ತಾ,
ಮುನ್ನಡೆಯುತ್ತಿರುವುದೇ,
ಆಧುನಿಕ ನಾಗರಿಕ ಸಮಾಜ.......
ನಾವು – ನೀವು – ಅವರು – ಇವರು,
ಎಲ್ಲರೂ ಪಾತ್ರಧಾರಿಗಳು,
ನಿಜ ಸೂತ್ರಧಾರಿಗಳನ್ನು ಹುಡುಕುತ್ತಾ......
ಬದಲಾವಣೆ ಬಯಸುತ್ತಾ......
ಪ್ರಬುದ್ಧ ಮನಸ್ಸು ಪ್ರಬುದ್ಧ ಸಮಾಜ,
ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ,



» ಲೇಖನ
ವಿವೇಕಾನಂದ.
ಹೆಚ್.ಕೆ.
9844013068

# ನನ್ನಿವಾಳ ನ್ಯಾಯಬೆಲೆ ಅಂಗಡಿ ಪಡಿತರ ವಿತರಣೆಯಲ್ಲಿ ವಿಳಂಬ: ಗ್ರಾಮಸ್ಥರ ಆಕ್ರೋಶ

» **ಚಳ್ಳಕೆರೆ**

ತಾಲ್ಲೂಕಿನ ನನ್ನಿವಾಳ ನ್ಯಾಯಬೆಲೆ ಅಂಗಡಿ ವ್ಯಾಪ್ತಿಗೆ ಬರುವ ಬಂಡೆಹಟ್ಟಿ, ನಕ್ಲೋರಹಟ್ಟಿ, ಚಿಕ್ಕಾಟ್ಲಹಟ್ಟಿ, ರತ್ನಗಿರಿ ಮುಂತಾದವರು ಹಟ್ಟಿಯ ಪಡಿತರಾರರಿಗೆ ಪ್ರತಿತಿಂಗಳು ನಿಯಬದ್ಧವಾಗಿ ಯಾವುದೇ ಪಡಿತರ ದೊರಕುತ್ತಿಲ್ಲ. ನ್ಯಾಯಬೆಲೆ ಅಂಗಡಿ ಮಾಲೀಕ ಕೇವಲ ಎರಡು ದಿನ ವಿತರಣೆ ಮಾಡಿ ನಂತರ ಪಡಿತರದಾರರಿಗೆ ಪಡಿತರ ಇಲ್ಲವೆಂದು ಸಬೂಬು ಹೇಳುತ್ತಾನೆಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ತಾಲ್ಲೂಕಿನ ಪ್ರತಿಯೊಂದು ಗ್ರಾಮೀಣ ಭಾಗದ ನ್ಯಾಯಬೆಲೆ ಅಂಗಡಿಯಲ್ಲಿ ತಿಂಗಳ ಮೊಲದ ವಾರವೇ ಪಡಿತರ ತಂದು ವಿತರಣೆ ಮಾಡಲಾಗುತ್ತಿದೆ. ಅದರೆ, ನನ್ನಿವಾಳದಲ್ಲಿ ಯಾವಗ ಪರಿಡಿತ ವಿತರಣೆ ಮಾಡುತ್ತಾ ಎಂಬ ಬಗ್ಗೆ ಮಾಹಿತಿ ಇಲ್ಲ. ನ್ಯಾಯಬೆಲೆ ಅಂಗಡಿ ಮುಂದೆ ಜನರು ಮುಂಜಾನೆಯಿಂದಲೇ ಸಾಲುಗಟ್ಟಿ ನಿಂತಾಗ ಇದನ್ನು ನೋಡಿ ಬೇರೆಯವರೂ ಪಡಿತರಕ್ಕೆ ಆಗಮಿಸುತ್ತಾರೆ. ನನ್ನಿವಾಳ ಗ್ರಾಮವೂ ಹೊರತು ಪಡಿಸಿ ಈ ನ್ಯಾಯಬೆಲೆ ಅಂಗಡಿಗೆ ಲಗತ್ತಾಗಿರುವ ಜನರು ಬರುವ ಮುನ್ನವೇ ಪಡಿತರ ಖಾಲಿಯಾಗಿದೆ ಎನ್ನುತ್ತಾರೆ.

ಜೂನ್ ತಿಂಗಳ ಪಡಿತರ ಪಡೆಯಲು ಸುತ್ತಮುತ್ತಲ ಹಟ್ಟಿಯ ಜನರು ನ್ಯಾಯಬೆಲೆ



ಅಂಗಡಿ ಮುಂದೆ ಕಾದುಕುಳಿತಿದ್ದರೂ ಇವರಿಗೆ ಪಡಿತರ ಪಡೆಯುವ ಭಾಗ್ಯ ಒದಗಿ ಬಂದಿಲ್ಲ. ಕಾರಣ, ನ್ಯಾಯಬೆಲೆ ಅಂಗಡಿ ಬೀಗಹಾಕಿದ್ದು ಅಂಗಡಿ ಮುಂಭಾಗದಲ್ಲೇ ಅವರು ಸಾಲುಗಟ್ಟಿ ನಿಂತಿರುತ್ತಾರೆ. ಪಡಿತರಕ್ಕಾಗಿ ಬೆಳಗ್ಗೆ 4.30 ಗಂಟೆಯಿಂದಲೇ ಕಾಯುತ್ತಿರುವರು ಮನೆಯಲ್ಲಿ ಅಡುಗೆ ಮಾಡದೆ ಉಪವಾಸದಿಂದ ಬಂದಿದ್ದು, ಏನು ಸಿಗದೇ ಇದ್ದಾಗ ಬೆಳಗ್ಗೆಯಿಂದ ಸಂಜೆವರೆಗೂ ಕಾದುಕಾದು ವಾಪಾಸ್ ಹೋಗುತ್ತಾರೆ. ಕೆಲ ಸಂದರ್ಭದಲ್ಲಿ ಹೆಬ್ಬೆಟ್ಟು ಹಾಕಿಸಿಕೊಂಡರೂ ಪಡಿತರ ನೀಡುತ್ತಿಲ್ಲವೆಂಬುವುದು ಶಿವಮ್ಮ, ಪಾಲಯ್ಯ, ಗೀತಮ್ಮ, ಓಬಯ್ಯ, ಪಾಪಮ್ಮ ಮುಂತಾದವರು ಆರೋಪಿಸಿದ್ದಾರೆ.

ಮಾಹಿತಿ ಪಡೆದು ತಹಶೀಲ್ದಾರ್ ರೇಹಾನ್‌ಪಾಷ, ಆಹಾರ ಶಿರಸ್ತೇಧಾರ್ ಶ್ರೀನಿವಾಸ್‌ಗೆ ಗ್ರಾಮಕ್ಕೆ ಭೇಟಿ ನೀಡಿ ತಪಾಸಣೆ ನಡೆಸುವಂತೆ ಸೂಚಿಸಿದ್ದಾರೆ. ಅಧಿಕಾರಿಗಳು ಬಂದಿದ್ದನ್ನು ತಿಳಿದ ನ್ಯಾಯಬೆಲೆ ಅಂಗಡಿ ಮಾಲೀಕ ಸರ್ವೆ ಸಮಸ್ಯೆಯಿಂದ ವಿತರಣೆ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಸಬೂಬು ಹೇಳಿದ್ದಾನೆ. ಬಂಡೆಹಟ್ಟಿ, ನಕ್ಲೋರಹಟ್ಟಿ, ಚಿಕ್ಕಾಟ್ಲಹಟ್ಟಿ, ರತ್ನಗಿರಿ ಮುಂತಾದವರು ಗ್ರಾಮದ ನೂರಾರು ಜನರು ಪ್ರತಿತಿಂಗಳು ಪಡಿತರವಿಲ್ಲದೆ ತೊಂದರೆಗೆ ಗೀಡಾಗಿದ್ದಾರೆ ಎನ್ನಲಾಗಿದೆ.

# ಯೋಗ ದಿನ, ಸಲಹಾ ಸಮಿತಿ ಸಭೆ



» **ದಾವಣಗೆರೆ**

ಆಯುಷ್ ಇಲಾಖೆ ಹಾಗೂ ವಿವಿಧ ಸರ್ಕಾರೇತರ ಸಂಸ್ಥೆಗಳ ವತಿಯಿಂದ ಜೂನ್ 21 ರಂದು 10ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಹಮ್ಮಿಕೊಳ್ಳುತ್ತಿರುವುದರಿಂದ ಜೂನ್ 10 ಬೆಳಿಗ್ಗೆ 11 ಗಂಟೆಗೆ ನಗರದ ಸರ್ಕಾರಿ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ದೇವರಾಜ್ ಅರಸ್ ಬಡಾವಣೆ, ಹೊಸ ಕೋರ್ಟ್ ಹತ್ತಿರ ಇಲ್ಲಿ ಸಲಹಾ ಸಭೆಯನ್ನು ಆಯೋಜಿಸಲಾಗಿದೆ ಎಂದು ಡಾ.ಯೋಗೇಂದ್ರ ತಿಳಿಸಿದ್ದಾರೆ.

# ಪರಿಷತ್ ಚುನಾವಣೆ ಕಾಂಗ್ರೆಸ್ ಗೆಲುವು: ಶಾಸಕರ ನೇತೃತ್ವದಲ್ಲಿ ವಿಜಯೋತ್ಸವ



» **ಚಳ್ಳಕೆರೆ**

ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ ಹಲವಾರು ಸುತ್ತಗಳ ಏಣಿಕೆ ನಂತರ ವಿಜಯಸಾಧಿಸಿದ್ದು, ಅವರ ವಿಜಯೋತ್ಸವವನ್ನು ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ನೇತೃತ್ವದಲ್ಲಿ ನಗರದ ವಾಲ್ಮೀಕಿ ವೃತ್ತದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಆಚರಣೆ ಮಾಡಲಾಯಿತು.

ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಅಭಿಮಾನಿಗಳು ನೂರಾರು ಸಂಖ್ಯೆಯಲ್ಲಿ ಸೇರಿ ಕಾಂಗ್ರೆಸ್ ಪಕ್ಷದ ಅಗ್ರಗಣ್ಯನಾಯಕಿ ಸೋನಿಯಾಗಾಂಧಿ, ರಾಹುಲ್‌ಗಾಂಧಿ, ಪ್ರಿಯಾಂಕಗಾಂಧಿ, ಮಲ್ಲಿಕಾರ್ಜುನ್‌ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪರವಾಗಿ ಜಯಘೋಷ ಹಾಕಿದರು. ಶಾಸಕ ರಘುಮೂರ್ತಿ ಆಗ್ನೇಯ ಶಿಕ್ಷಕರ ಕ್ಷೇತ್ರದಲ್ಲಿ ಇದೇ ಮೊದಲಬಾರಿಗೆ ಕಾಂಗ್ರೆಸ್ ಪಕ್ಷ ಜಯಗಳಿಸಿದೆ. ವಿಶೇಷವಾಗಿ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಡಿ.ಟಿ.ಶ್ರೀನಿವಾಸ್ ಪತ್ನಿ ಪೂರ್ಣಿಮಾಶ್ರೀನಿವಾಸ್ ಕಳೆದ ಸುಮಾರು ನಾಲ್ಕು ತಿಂಗಳಿನಿಂದ ಕ್ಷೇತ್ರದಲ್ಲಿ ಹತ್ತಾರು ಬಾರಿ ಪ್ರವಾಸಗೊಂಡು ಶಿಕ್ಷಕರ ಸಮಸ್ಯೆಗಳ ಬಗ್ಗೆ ಸ್ಪಂದಿಸುವ ಭರವಸೆ ನೀಡಿದ್ದು, ಆಗ್ನೇಯ ಶಿಕ್ಷಕರ ಕ್ಷೇತ್ರದ ಮತದಾರರು ಎರಡನೇ ಬಾರಿಗೆ ಸ್ಪರ್ಧಿಸಿದ್ದ ಡಿ.ಟಿ.ಶ್ರೀನಿವಾಸ್‌ಗೆ ಮತ ನೀಡಿ ಅವರ ವಿಜಯದ ಕನಸನ್ನು ನನಸು ಮಾಡಿದ್ದಾರೆಂದರು. ಈ ಸಂದರ್ಭದಲ್ಲಿ ಡಿ.ಟಿ.ಶ್ರೀನಿವಾಸ್‌ಪರ ಮತಚಲಾವಣೆ ಮಾಡಿದ ಶಿಕ್ಷಕರ ಕ್ಷೇತ್ರದ ಎಲ್ಲಾ ಶಿಕ್ಷಕರಿಗೂ, ಕಾರ್ಯನಿರ್ವಹಿಸಿದ ಅಭಿಮಾನಿಗಳಿಗೂ, ಪಕ್ಷದ ಕಾರ್ಯಕರ್ತರಿಗೂ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು. ನಿವೃತ್ತ ಪ್ರಾಂಶುಪಾಲ ಎಸ್.ಲಕ್ಷ್ಮಣ್, ಪ್ರೊ.ದೇವೀರಪ್ಪ, ಕೆ.ಜೆ.ಅಶೋಕ್, ಗಿರಿಯಪ್ಪ, ಸಂತೋಷ್‌ಕುಮಾರ್, ರಾಘವೇಂದ್ರ, ಕೃಷ್ಣ, ಷಣ್ಮುಖಪ್ಪ, ಹನುಮಂತಪ್ಪ, ಜಿ.ಟಿ.ಶಶಿಧರ, ನಗರಸಭಾ ಸದಸ್ಯರಾದ ಕೆ.ವೀರಭದ್ರಪ್ಪ, ಬಿ.ಟಿ.ರಮೇಶ್‌ಗೌಡ, ನಾಮಿನಿ ಸದಸ್ಯರಾದ ಅನ್ವರ್‌ಮಾಸ್ಟರ್, ನೇತಾಜಿಪ್ರಸನ್ನ, ಟಿ.ವೀರಭದ್ರಪ್ಪ, ನಟರಾಜು, ಮುಂತಾದವರು ಉಪಸ್ಥಿತರಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T